ಸಂಪುಟ 01 | ಸಂಚಿಕೆ 148 | ಸೋಮವಾರ 20 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಬಸವ ಜಯಂತಿ

ಬಸವ ಜಯಂತಿಯು ಏಪ್ರಿಲ್ 20, ಸೋಮವಾರದಂದು ಆಚರಿಸಲಾಗುತ್ತದೆ. ಇದು 12ನೇ ಶತಮಾನದ ಸಮಾಜ ಸುಧಾರಕ, ದಾರ್ಶನಿಕ ಮತ್ತು ವಿಶ್ವಗುರು ಬಸವಣ್ಣನವರ 893ನೇ ಜನ್ಮದಿನೋತ್ಸವವಾಗಿದೆ. ಕರ್ನಾಟಕ ಸರ್ಕಾರವು ಈ ದಿನದಂದು ಸಾರ್ವಜನಿಕ ರಜೆ ಘೋಷಿಸಿದೆ.
ಈ ಸಂದರ್ಭದಲ್ಲಿ ಬಸವಣ್ಣನವರ ವಚನಗಳನ್ನು ಸ್ಮರಿಸಿ, ಸಮಾನತೆ ಮತ್ತು ದಯೆಯ ಸಂದೇಶವನ್ನು ಪಸರಿಸಲಾಗುತ್ತದೆ.

## ಸುಭಾಷಿತ

ಒಂದು ಲಿಲ್ಲಿಯಾಗಲಿ ಅಥವಾ ಗುಲಾಬಿಯಾಗಲಿ ಎಂದಿಗೂ ನಟಿಸುವುದಿಲ್ಲ, ತನ್ನ ಮೂಲಗುಣಕ್ಕೆ ತಕ್ಕಂತೆ ಇರುವುದೇ ಅದರ ಸೌಂದರ್ಯದ ಗುಟ್ಟು.

ಜಿಡ್ಡು ಕೃಷ್ಣಮೂರ್ತಿ

# ಇರಾನ್ ಸಂಘರ್ಷದ ಬೆನ್ನಲ್ಲೇ ಕ್ಷಿಪಣಿ ಉಡಾಯಿಸಿ ಆತಂಕ ಹೆಚ್ಚಿಸಿದ ಉತ್ತರ ಕೊರಿಯಾ

ಸಿಯೋಲ್: ಇರಾನ್-ಇಸ್ರೇಲ್, ಅಮೇರಿಕಾ ನಡುವಿನ ಯುದ್ಧವೇ ಇನ್ನೂ ತಾರ್ಕಿಕ ಅಂತ್ಯ ಪಡೆಯದ ಹೊತ್ತಿನಲ್ಲಿ, ಉತ್ತರ ಕೊರಿಯಾ ಭಾನುವಾರ ಅಲ್ಪ ದೂರದ ಹಲವು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಸಮುದ್ರದ ದಿಕ್ಕಿನತ್ತ ಉಡಾಯಿಸಿ ಆತಂಕ ಮೂಡಿಸಿದೆ.ಜಾಗತಿಕ ಸಂಘರ್ಷದ ಹಿನ್ನೆಲೆಯಲ್ಲಿ ಉತ್ತರ ಕೊರಿಯಾ ತನ್ನ ಅಣ್ವಸ್ತ್ರ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತಿರುವುದು ನೆರೆಯ ರಾಷ್ಟ್ರಗಳ ನಿದ್ದೆಗೆಡಿಸಿದೆ.

ವಿಶ್ವಸಂಸ್ಥೆಯ ಅಣು ನಿಯಂತ್ರಣ ಸಂಸ್ಥೆ ಉತ್ತರ ಕೊರಿಯಾ ಅಣ್ವಸ್ತ್ರ ನಿರ್ಮಾಣದಲ್ಲಿ ತೀವ್ರ ಪ್ರಗತಿ ಸಾಧಿಸುತ್ತಿದೆ ಎಂದು ಎಚ್ಚರಿಕೆ ನೀಡಿದ್ದ ಕೆಲವೇ ದಿನಗಳಲ್ಲಿ ಈ ಪರೀಕ್ಷೆಗಳು ನಡೆದಿವೆ. ಏತನಧ್ಯೆ ದಕ್ಷಿಣ ಕೊರಿಯಾದ ಸಂಯುಕ್ತ ಸೈನಿಕ ಮುಖ್ಯಸ್ಥರ ಪ್ರಕಾರ, ಸಿನ್ಪೋ ಪ್ರದೇಶದಿಂದ ಉಡಾಯಿಸಲಾದ ಕ್ಷಿಪಣಿಗಳು ಸುಮಾರು 140 ಕಿಲೋಮೀಟರ್ ದೂರ ಪೂರ್ವ ಸಮುದ್ರದತ್ತ ಹಾರಿವೆ. ಉತ್ತರ ಕೊರಿಯಾದ ಯಾವುದೇ ಪ್ರಚೋದನೆಗೆ ತಕ್ಕ ಪ್ರತಿಕ್ರಿಯೆ ನೀಡಲು ದಕ್ಷಿಣ ಕೋರಿಯಾ ಸಿದ್ಧವಾಗಿದೆ. ಇದೇ ಸಮಯದಲ್ಲಿ ವಿಶ್ವಸಂಸ್ಥೆ ಹಾಗೂ ಜಪಾನ್ ಜೊತೆ ನಿಕಟ ಸಂಪರ್ಕದಲ್ಲಿದೆ ಎಂದು ತಿಳಿಸಿದೆ. ದಕ್ಷಿಣ ಕೊರಿಯಾದ ರಾಷ್ಟ್ರೀಯ ಭದ್ರತಾ ಮಂಡಳಿಯ ತುರ್ತು ಸಭೆಯಲ್ಲಿ, ಉತ್ತರ ಕೊರಿಯಾದ ಪದೇ ಪದೇ ಕ್ಷಿಪಣಿ ಪರೀಕ್ಷೆಗಳ ಬಗ್ಗೆ ಆತಂಕ ವ್ಯಕ್ತಪಡಿಸಲಾಗಿದೆ. ತಕ್ಷಣವೇ ಈ ರೀತಿಯ ಪರೀಕ್ಷೆಗಳನ್ನು ನಿಲ್ಲಿಸುವಂತೆ ಆಗ್ರಹಿಸಲಾಗಿದೆ.



ದಕ್ಷಿಣ ಕೊರಿಯಾದ ಅಧ್ಯಕ್ಷ ಲೀ ಜಾ ಮ್ಯೆಯುಂಗ್ ಭಾರತ ಮತ್ತು ವಿಯೆಟ್ನಾಂ ಪ್ರವಾಸಕ್ಕೆ ತೆರಳುವ ಮುನ್ನಾ ಈ ಕ್ಷಿಪಣಿ ಉಡಾವಣೆಗಳು ನಡೆದಿವೆ.ಅಮೆರಿಕ ಮತ್ತು ಜಪಾನ್ ಸೇನೆಗಳು ಕೂಡ ಈ ಕ್ಷಿಪಣಿ ಉಡಾವಣೆಗಳನ್ನು ದೃಢಪಡಿಸಿವೆ. ಅಮೆರಿಕದ ಇಂಡೋ-ಪೆಸಿಫಿಕ್ ಕಮಾಂಡ್ ತನ್ನ ದೇಶ ಮತ್ತು ಮೈತ್ರಿ ರಾಷ್ಟ್ರಗಳ ರಕ್ಷಣೆಗೆ ಬದ್ಧವಾಗಿದೆ ಎಂದು ತಿಳಿಸಿದೆ. ಜಪಾನ್ ರಕ್ಷಣಾ ಸಚಿವಾಲಯವು ಈ ಪರೀಕ್ಷೆಗಳು ಪ್ರಾದೇಶಿಕ ಹಾಗೂ ಜಾಗತಿಕ ಶಾಂತಿಗೆ ಧಕ್ಕೆ ತರುತ್ತವೆ ಎಂದು ತೀವ್ರ ವಿರೋಧ ವ್ಯಕ್ತಪಡಿಸಿದೆ. ಸಿನ್ಪೋ ಉತ್ತರ ಕೊರಿಯಾದ ಪೂರ್ವ ಕರಾವಳಿ ನಗರವಾಗಿದ್ದು, ಅಲ್ಲಿ ಪ್ರಮುಖ ನೌಕಾ ನಿರ್ಮಾಣ ಶಿಪ್‌ಯಾರ್ಡ್ ಇದೆ. ಇಲ್ಲಿ ಜಲಾಂತರ್ಗಾಮಿ ನೌಕೆಗಳ ನಿರ್ಮಾಣ ನಡೆಯುತ್ತದೆ. ಈ ಕ್ಷಿಪಣಿಗಳನ್ನು ಜಲಾಂತರ್ಗಾಮಿ ನೌಕೆಯಿಂದ ಅಥವಾ ಭೂಮಿ ಆಧರಿತ ಲಾಂಚರ್‌ಗಳಿಂದ ಉಡಾಯಿಸಲಾಗಿದೆಯೇ ಎಂಬುದನ್ನು ದಕ್ಷಿಣ ಕೊರಿಯಾ ಪರಿಶೀಲಿಸುತ್ತಿದೆ.

ಜಲಾಂತರ್ಗಾಮಿ ನೌಕೆಯಿಂದ ಉಡಾಯಿಸಿದ್ದರೆ, ಅದು ನಾಲ್ಕು ವರ್ಷಗಳ ಬಳಿಕದ ಮೊದಲ ಪರೀಕ್ಷೆಯಾಗಲಿದೆ. ನೀರಿನಡಿಯಲ್ಲಿ ಕ್ಷಿಪಣಿ ಉಡಾವಣೆ ಸಾಮರ್ಥ್ಯ ಹೆಚ್ಚಿದರೆ, ಅವುಗಳನ್ನು ಮುಂಚಿತವಾಗಿ ಪತ್ತೆ ಹಚ್ಚುವುದು ಕಷ್ಟವಾಗುತ್ತದೆ ಎಂಬ ಕಾರಣದಿಂದ ಇದು ಆತಂಕಕಾರಿ ಬೆಳವಣಿಗೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಈ ವರ್ಷದಲ್ಲಿ ಉತ್ತರ ಕೊರಿಯಾದಿಂದ ನಡೆದ ಶಸಾ?ತ್ರಸ್ತ್ರ ಪರೀಕ್ಷೆಗಳ ಸರಣಿಯಲ್ಲಿ ಇದು ಇತ್ತೀಚಿನ ಘಟನೆಯಾಗಿದೆ. ಇತ್ತೀಚೆಗೆ ಮುಂಚೂಣಿ ನೌಕೆಯಿಂದ ಕ್ಷಿಪಣಿ ಪರೀಕ್ಷೆಗಳನ್ನು ವೀಕ್ಷಿಸಿದ್ದಾಗಿ ತಿಳಿಸಲಾಗಿತ್ತು. ಅದಕ್ಕೂ ಮೊದಲು ಕ್ಲಸ್ಟರ್ ಬಾಂಬ್ ಸಾಮರ್ಥ್ಯದ ಕ್ಷಿಪಣಿಗಳು ಸೇರಿದಂತೆ ಹೊಸ ಶಸಾ?ತ್ರಸ್ತ್ರಗಳ ಪರೀಕ್ಷೆ ನಡೆಸಲಾಗಿದೆ. ಕಳೆದ ತಿಂಗಳು ಅಮೆರಿಕದ ಭೂ ಭಾಗ ತಲುಪಬಲ್ಲ ಘನ ಇಂಧನ ಕ್ಷಿಪಣಿ ಎಂಜಿನ್ ಪರೀಕ್ಷೆ ನಡೆಸಲಾಗಿದೆ ಎಂದು ಹೇಳಲಾಗಿದೆ.

2019ರಲ್ಲಿ ಅಮೆರಿಕಾ ಅಧ್ಯಕ್ಷ ಡೊನಾಲ್?ಡ ಟ್ರಂಪ್ ಜೊತೆ ನಡೆದ ಅಣು ಮಾತುಕತೆ ವಿಫಲವಾದ ಬಳಿಕ, ಕಿಮ್ ಜಾಂಗ್ ಉನ್ ತನ್ನ ಅಣು ಹಾಗೂ ಕ್ಷಿಪಣಿ ಶಕ್ತಿಯನ್ನು ವಿಸ್ತರಿಸಲು ಒತ್ತು ನೀಡುತ್ತಿದ್ದಾರೆ. ಟ್ರಂಪ್ ಮತ್ತೆ ಮಾತುಕತೆ ಆರಂಭಿಸಲು ಆಸಕ್ತಿ ತೋರಿದರೂ, ಅಣ್ವಸ್ತ್ರ ನಿಶ್ಶಸ್ತ್ರೀಕರಣವನ್ನು ಪೂರ್ವ ಷರತ್ತಾಗಿ ಒಪ್ಪಿಕೊಳ್ಳಲು ಉತ್ತರ ಕೊರಿಯಾ ಸಿದ್ಧವಿಲ್ಲ. ಈ ಮಧ್ಯೆ ಮೇ ತಿಂಗಳಲ್ಲಿ ಟ್ರಂಪ್ ಮತ್ತು ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ನಡುವೆ ನಡೆಯಲಿರುವ ಸಭೆಯನ್ನು ಗಮನದಲ್ಲಿಟ್ಟುಕೊಂಡು, ಉತ್ತರ ಕೊರಿಯಾ ತನ್ನ ಮಾತುಕತೆ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಈ ಪರೀಕ್ಷೆಗಳನ್ನು ನಡೆಸುತ್ತಿದೆ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ. ಉತ್ತರ ಕೊರಿಯಾದ ಅಣು ಉತ್ಪಾದನಾ ಕೇಂದ್ರಗಳಲ್ಲಿ ಚಟುವಟಿಕೆಗಳು ಹೆಚ್ಚುತ್ತಿರುವುದನ್ನು ಬುಧವಾರ ದೃಢಪಡಿಸಲಾಗಿತ್ತು.

## ಪಾಟೀಲ್ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿನಿ ಕು.ಶ್ವೇತಾ ಮೇಟಿಗೆ ಗೋಲ್ಡ್ ಮೆಡಲ್ ಅಭಿನಂದಿಸಿದ ಆಡಳಿತ ಮಂಡಳಿ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ನಗರದ ಪಾಟೀಲ್ ಮಹಿಳಾ ಡಿಗ್ರಿ ಕಾಲೇಜಿನ ವಿದ್ಯಾರ್ಥಿನಿ ಬಿ.ಎಸ್.ಸಿ ಪದವಿಯ ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಗೋಲ್ಡ್ ಮೆಡಲ್ ಪಡೆದುಕೊಂಡಿರುವ ಕು.ಶ್ವೇತಾ ಮೇಟಿ ಅವರು, ಏ.21 ಮಂಗಳವಾರದಂದು ನಡೆಯಲಿರುವ ವಿಜಯಪುರ ಜಿಲ್ಲೆಯ ಮಹಿಳಾ ವಿಶ್ವವಿದ್ಯಾನಿಲಯದ 17 ನೇ ವಾರ್ಷಿಕ ಘಟಿಕೋತ್ಸವದಲ್ಲಿ ರಾಜ್ಯಪಾಲರು ಪ್ರಶಸ್ತಿ ಪ್ರಧಾನ ಮಾಡಲಿದ್ದಾರೆ ಎಂದು ಪಾಟೀಲ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಆರ್.ಸಿ.ಪಾಟೀಲ್ ತಿಳಿಸಿದ್ದಾರೆ.



ವಿದ್ಯಾರ್ಥಿನಿ ಕು.ಶ್ವೇತಾ ಮೇಟಿ ಅವರಿಗೆ ಪಾಟೀಲ್ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಾದ ಆರ್.ಪಂಪಾಪತಿ ಪಾಟೀಲ್, ಅಭಿವೃದ್ಧಿ ಸಮಿತಿ ಅಧ್ಯಕ್ಷ ಶರಣಬಸವ ವಕೀಲರು, ಆಡಳಿತಾಧಿಕಾರಿ ಭಾರತಿಕೃಷ್ಣ ನೆಕ್ಕಂಟಿ, ಪ್ರಾಚಾರ್ಯ ಮಾರುತಿ ಭಂಡಾರ್‌ಕರ್ ಹಾಗೂ ಉಪನ್ಯಾಸಕರು, ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ಅಗ್ನಿವೀರರಿಗೆ ವೇಗದ ಓದು ಹಾಗೂ ಸ್ಮರಣಶಕ್ತಿ ತರಬೇತಿ ಕಾರ್ಯಕ್ರಮ ಯಶಸ್ವಿ



ನೈಜ್ಯ ದೆಸೆ ನ್ಯೂಸ್

ಕುಮಟಾ: ಯುವಕರಲ್ಲಿ ಅಧ್ಯಯನ ಸಾಮರ್ಥ್ಯವನ್ನು ವೃದ್ಧಿಸಿ ಸೇನಾ ನೇಮಕಾತಿ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಲು ಸಹಕಾರಿಯಾಗುವ ಉದ್ದೇಶದಿಂದ ಅಗ್ನಿವೀರ ಅಭ್ಯರ್ಥಿಗಳಿಗೆ "ವೇಗವಾಗಿ ಓದುವುದು ಹೇಗೆ ಮತ್ತು ಸ್ಮರಣ ಶಕ್ತಿ ವೃದ್ಧಿ" ವಿಷಯದ ವಿಶೇಷ ತರಬೇತಿ ಕಾರ್ಯಕ್ರಮವನ್ನು ವಿಧಾತ್ರಿ ಅಕಾಡೆಮಿ ಹಾಗೂ ಕೊಂಕಣ ಎಜುಕೇಶನ್ ಟ್ರಸ್ಟ್, ಕುಮಟಾ ಇವರ ಸಹಯೋಗದಲ್ಲಿ ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ಅಭ್ಯರ್ಥಿಗಳಿಗೆ ವೇಗದ ಓದು ವಿಧಾನಗಳು, ಏಕಾಗ್ರತೆ ಹೆಚ್ಚಿಸುವ ತಂತ್ರಗಳು, ಸ್ಮರಣಶಕ್ತಿ ಅಭಿವೃದ್ಧಿ ವಿಧಾನಗಳು, ಸಮಯ ನಿರ್ವಹಣೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಾದ ಅಧ್ಯಯನ ತಂತ್ರಗಳನ್ನು ಪ್ರಾಯೋಗಿಕವಾಗಿ ತಿಳಿಸಲಾಯಿತು. ಚಿದಾನಂದ್ ಸರ್ (Lecturer), ಗುರುರಾಜ್ ಸರ್ (ವಿಧಾತ್ರಿ ಅಕಾಡೆಮಿ), ಗಣೇಶ್ ಸರ್ (HM), ಶಾಂತರಾಮ್ ಭಟ್ ಕೆರೆ (Army) ಹಾಗೂ ಗಿರೀಶ್ ನಾಯ್ಕ್ ಅವರು ಉಪಸ್ಥಿತರಿದ್ದು ಯುವಕರಿಗೆ ಪ್ರೇರಣಾದಾಯಕ ಮಾರ್ಗದರ್ಶನ ನೀಡಿದರು.

ಮಾರುತಿ ಕುಮಟಾ ಅವರು ವೇಗದ ಓದು ತರಬೇತಿ ನಡೆಸಿ, ಸರಿಯಾದ ಅಭ್ಯಾಸ ಮತ್ತು ಮನಸ್ಸಿನ ಏಕಾಗ್ರತೆ ಇದ್ದರೆ ಯಾವುದೇ ಗುರಿ ಸಾಧಿಸಲು ಸಾಧ್ಯ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಅಗ್ನಿವೀರ ಅಭ್ಯರ್ಥಿಗಳು ತರಬೇತಿಯಿಂದ ಆತ್ಮವಿಶ್ವಾಸ ಹೆಚ್ಚಿದೆಯೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಅಂತ್ಯದಲ್ಲಿ ಎಲ್ಲಾ ಅತಿಥಿಗಳಿಗೆ ಹಾಗೂ ತರಬೇತಿದಾರರಿಗೆ ಕೃತಜ್ಞತೆ ಸಲ್ಲಿಸಲಾಯಿತು.

## ಗ್ರಾಮ ಆಡಳಿತ ಸಂಘದ ನೂತನ ಪದಾಧಿಕಾರಿಗಳ ನೇಮಕ



ನೈಜ್ಯ ದೆಸೆ ನ್ಯೂಸ್

ಮಸ್ಕಿ: ಕರ್ನಾಟಕ ರಾಜ್ಯ ಗ್ರಾಮ ಆಡಳಿತ ಅಧಿಕಾರಿಗಳ ಸಂಘ ತಾಲೂಕು ಘಟಕದ ನೂತನ ಪದಾಧಿಕಾರಿಗಳ ಮಾಡಲಾಯಿತು ಎಂದು ನೂತನ ಅಧ್ಯಕ್ಷ ಶಿವಪ್ಪ ರಾಠೋಡ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು.

ಶಿವಪ್ಪ ರಾಠೋಡ (ಅಧ್ಯಕ್ಷ), ಮೌನೇಶ ಪವಾರ್ (ಪ್ರಧಾನ ಕಾರ್ಯದರ್ಶಿಯಾಗಿ), ಶ್ರೀ ಪ್ರೇಮ ಕುಮಾರ್ (ಖಜಾಂಚಿ), ಅಮರೇಶ ಭೂಮಿ ಕೇಂದ್ರ (ಉಪಾಧ್ಯಕ್ಷ), ಉಮಾದೇವಿ (ಮಹಿಳಾ ಉಪಾಧ್ಯಕ್ಷೆ), ಮಹಾಂತೇಶ (ಗೌರವಧ್ಯಕ್ಷ), ಗಂಗಪ್ಪ ಪವಾರ್ (ಜಿಲ್ಲಾ ಪರಿಷತ್ ಅಧ್ಯಕ್ಷ), ರಾಕೇಶ್ ಮತ್ತು ರಾಮಪ್ಪ (ಸಂಘಟನಾ ಕಾರ್ಯದರ್ಶಿಗಳಾಗಿ), ಅಬುಬಕರ್ (ಆಂತರಿಕ ಪರಿಶೋಧಕರಾಗಿ), ಮೋಹನ್ (ಕ್ರೀಡಾ ಕಾರ್ಯದರ್ಶಿಯಾಗಿ), ಅಮರೇಶ ಮಾಟೂರ (ಸಾಮಾಜಿಕ ಜಾಲತಾಣಗಳ ನಿರ್ವಹಣಾ ಕಾರ್ಯದರ್ಶಿ), ಹನುಮಂತ (ಕಾನೂನು ಸಲಹೆಗಾರರಾಗಿ) ಸರ್ವಾನುಮತದಿಂದ ಜಿಲ್ಲಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನೇಮಕ ಮಾಡಲಾಯಿತು ಎಂದು ತಿಳಿಸಿದರು.

## ವಿಶ್ವಕರ್ಮ ಮಹಾಸಭಾ ತಾಲೂಕ ಘಟಕ ಪದಾಧಿಕಾರಿಗಳ ನೇಮಕ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ವಿಶ್ವಕರ್ಮ ಸಮಾಜದ ಹೋರಾಟಗಾರರು, ಮಾಜಿ ವಿಧಾನ ಪರಿಷತ್ ಸದಸ್ಯರು, ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಜ್ಯಾಧ್ಯಕ್ಷ ಕೆ.ಪಿ. ನಂಜುಂಡಿ ಸೂಚನೆ ಮೇರೆಗೆ ಜಿಲ್ಲಾ ಯುವ ಘಟಕ ಮಾಜಿ ಅಧ್ಯಕ್ಷ ವಿಜಯಕುಮಾರ ಬಡಿಗೇರ್ ನೇತೃತ್ವದಲ್ಲಿ ಏ.18 ರಂದು ಕಾಳಿಕಾದೇವಿ ದೇವಸ್ಥಾನದಲ್ಲಿ ತಾಲೂಕು ಘಟಕದ ನೂತನ ಪದಾಧಿಕಾರಿಗಳನ್ನು ನೇಮಿಸಲಾಗಿದೆ ಎಂದು ವಿಶ್ವಕರ್ಮ ಮಹಾಸಭಾ ಜಿಲ್ಲಾ ಯುವ ಘಟಕದ ಮಾಜಿ ಅಧ್ಯಕ್ಷ ವಿಜಯಕುಮಾರ ಬಡಿಗೇರ್ ತಿಳಿಸಿದರು.



ಪುಂಡಲಿಂಗಪ್ಪ ಬಡಿಗೇರ್ ಹಂಚಿನಾಳ (ಗೌರವಾಧ್ಯಕ್ಷ), ಕಾಳಪ್ಪ ಕಣ್ಣೂರು (ಅಧ್ಯಕ್ಷ), ಮೌನೇಶ ಬೆಳ್ಳಿಗನೂರು, ದೇವೇಂದ್ರಪ್ಪ ತಲೇಖಾನ (ಉಪಾಧ್ಯಕ್ಷ), ನಾಗಲಿಂಗಪ್ಪ ಪಾಮನಕಲ್ಲೂರು, (ಪ್ರಧಾನ ಕಾರ್ಯದರ್ಶಿ), ಡಾ.ಶಿವಪ್ರಸಾದ (ಖಜಾಂಚಿ), ಶಿವು ಮಸ್ಕಿ (ಸ.ಕಾರ್ಯದರ್ಶಿ) ಮತ್ತು ಕಾರ್ಯಕಾರಿ ಸಮಿತಿ ಸದಸ್ಯರುಗಳಾಗಿ ನಾಗಪ್ಪ ಉದ್ಯಾಳ, ವೀರೇಶ ಗೋನಾಳ, ಶಶಿಧರ ಬಡಿಗೇರ್ ಮಸ್ಕಿ, ಮಂಜುನಾಥ ಬುದ್ದಿನ್ನಿ, ಮೌನೇಶ ತೆಲೆಖಿನ್, ಕಾಳಪ್ಪ ಹುಲ್ಲೂರು ಇವರುಗಳನ್ನು ನೇಮಿಸಲಾಗಿದೆ ಎಂದು ತಿಳಿಸಿದರು.

## ತುರ್ವಿಹಾಳದ ಕೌಕುಂಟ್ಲ ಕುಟುಂಬದಿಂದ ಕಾರುಣ್ಯಾಶ್ರಮದ ಗೌರವ ಸನ್ಮಾನ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಸಿಂಧನೂರು ತಾಲೂಕಿನ ತುರ್ವಿಹಾಳ ಪಟ್ಟಣದ ಕೌಕುಂತಲ ಕುಟುಂಬದ ಹಿರಿಯರಾದ ವೆಂಕಮ್ಮ ದಿ. ಶ್ರೀ ನಿವಾಸ ಶ್ರೇಷ್ಠಿ ಮತ್ತು ಅಪಾರ ಕುಟುಂಬದಿಂದ ಸಿಂಧನೂರಿನ ಕಾರುಣ್ಯ ಆಶ್ರಮದ ಸೇವಾಕರ್ತ ದಂಪತಿಗಳಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಸುಜಾತ ಹಿರೇಮಠ ಈ ದಂಪತಿಗಳಿಗೆ ಹೊಸ ವಸ್ತ್ರಗಳನ್ನು ವಿತರಿಸಿ ಸನ್ಮಾನಿಸಿ ಗೌರವಿಸಿದರು.

ನಂತರ ಆಶ್ರಮದ ವತಿಯಿಂದ ವೆಂಕಮ್ಮ ಕೌಕುಂಟ್ಲ ಇವರನ್ನು ಗೌರವಿಸಿ ಮಂತ್ರಾಲಯದ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಭಾವಚಿತ್ರವನ್ನು ನೆನಪಿನ ಕಾಣಿಕೆಯಾಗಿ ವಿತರಿಸಲಾಯಿತು. ಸನ್ಮಾನ ಸ್ವೀಕರಿಸಿ ಕಾರುಣ್ಯ ಆಶ್ರಮದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ನಮ್ಮ ತುರ್ವಿಹಾಳ ಪಟ್ಟಣದ ಕೌಕುಂಟ್ಲ ಈ



ಆಶ್ರಮ ಹುಟ್ಟಿದಾಗಿನಿಂದಲೂ ಸಹ ನಿರಂತರವಾಗಿ ಸಹಾಯ ಸಹಕಾರ ಮಾಡುತ್ತಾ ಪ್ರತಿಯೊಂದು ಸೇವಾ ಕಾರ್ಯಗಳಲ್ಲಿ ಭಾಗವಹಿಸುತ್ತಿರುವದು ನಮ್ಮ ಸೇವೆಗೆ ಸ್ಫೂರ್ತಿಯಾಗಿದೆ. ಈ ಕುಟುಂಬದ ಕೆಲವರು ವಿದೇಶದಲ್ಲಿ ವಾಸ ಮಾಡುತ್ತಿದ್ದರೂ ಕಾರುಣ್ಯ ಕುಟುಂಬದ ಪ್ರತಿಯೊಂದು ಕಷ್ಟ ಸುಖಗಳನ್ನು ಅರಿತುಕೊಂಡು ಆಶ್ರಮದಲ್ಲಿರುವ ಎಲ್ಲ ಹಿರಿಯರು ಕೂಡ ತಂದೆ ತಾಯಿಗಳ ಸಮಾನರು ವಯಸ್ಕರ ಬುದ್ಧಿಮಾಂದ್ಯರೂ ಕೂಡ ಕೌಕುಂಟ್ಲ ಪದ ಮಕ್ಕಳಿದ್ದಂತೆ ಎನ್ನುವ ಮನೋಭಾವನೆಯನ್ನು ಹೊಂದಿರುವ ಈ ಕುಟುಂಬಕ್ಕೆ ಕಾರುಣ್ಯಾಶ್ರಮದ ಆಶೀರ್ವಾದ ಸದಾವಕಾಲವಿರುತ್ತದೆ.

ಈ ಕುಟುಂಬದ ಇನ್ನೋರ್ವ ಆದರ್ಶ ದಂಪತಿಗಳಾದ ವಿದ್ಯಾ ಲಕ್ಷ್ಮಿ ಕೆ ವಿನೋದ್ ಕುಮಾರ್ ಈ ದಂಪತಿಗಳ ಕರುಳಿನ ಕುಡಿಯಾದ ಶ್ರೀ ತಾರಕರಾಮ್ ನಾಮಕರಣ ಕಾರ್ಯಕ್ರಮ ಮುಗಿದ ಹಿನ್ನೆಲೆಯಲ್ಲಿ ಇಡೀ ಕುಟುಂಬವೇ ಬಂದು ನಮ್ಮನ್ನು ಗೌರವಿಸಿದ್ದು ಮತ್ತು ಹೊಸ ವಸ್ತ್ರಗಳನ್ನು ವಿತರಿಸಿ ಸಹಾಯ ಸೌಜನ್ಯದ ಮೂಲಕ ಸಹಕರಿಸಿದ್ದು ಸಮಾಜ ಸೇವೆಗೆ ಮಾದರಿಯಾದ ಸಂದರ್ಭ ಇವರೆಲ್ಲರ ನಂಬಿಕೆ ಪ್ರೀತಿ ವಿಶ್ವಾಸ ಗೌರವವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕಾರುಣ್ಯ ಕುಟುಂಬವು ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತದೆ. ನಾಡಿನ ಎಲ್ಲಾ ಮಹಾದಾನಿಗಳು ಕಾರುಣ್ಯ ಆಸ್ಥಾನಕ್ಕೆ ಸ್ವಂತ ಜಾಗ ಒದಗಿಸಿ ಕೊಡಲಿ ಎನ್ನುವ ವಿನಂತಿ ಕಾರುಣ್ಯ ಕುಟುಂಬದ್ದಾಗಿದೆ.

ಯಾವತ್ತಿಗೂ ಕೂಡ ಕಾರುಣ್ಯ ಕುಟುಂಬಕ್ಕೆ ಬಹುದೊಡ್ಡ ಶಕ್ತಿಯಾಗಿರುವ ತುರ್ವಿಹಾಳ ಕೌಕುಂಟ್ಲ ಕುಟುಂಬಕ್ಕೆ ನಿತ್ಯ ಪ್ರಾರ್ಥನೆಯಲ್ಲಿ ಈ ಕುಟುಂಬಕ್ಕೆ ಶುಭ ಹಾರೈಸಲಾಗಿದೆ ಎಂದು ಮಾತನಾಡಿ ಈ ಕುಟುಂಬದ ಎಲ್ಲಾ ಗುರು ಹಿರಿಯರುಗಳಿಗೆ ಆಶ್ರಮದ ವತಿಯಿಂದ ಧನ್ಯವಾದಗಳನ್ನು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ತುರ್ವಿಹಾಳ ಪಟ್ಟಣದ ಕೌಕುಂಟ್ಲ ಕುಟುಂಬದ ಸದಸ್ಯರುಗಳಾದ ವೆಂಕಮ್ಮ. ನಾಗರಾಜ ಶ್ರೇಷ್ಠಿ. ವಿದ್ಯಾಲಕ್ಷ್ಮಿ. ವಿನೋದ್ ಕುಮಾರ್. ಶ್ರೀ ತಾರಕರಾಮ್. ಭಾಗ್ಯಶ್ರೀ. ಎಂ. ಆರ್. ವಿಜಯಲಕ್ಷ್ಮೀ. ಪ್ರಿಯಾಂಕ. ವಿಶಾನ್. ನಿಹಾಲ್. ವಿಹಾನ್. ಹಾಗೂ ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ. ಮೀನಾಕ್ಷಮ್ಮ..ಲಕ್ಷ್ಮಮ್ಮ.

## ಸಾಹಿತ್ಯ ಸಿಂಚನ

ನಗು

ನಗು ಒಂದು ಮೌನದ ಮಾತು,
ಹೃದಯ ಹೇಳುವ ಸಿಹಿ ಹಾಡು.

ನಗುವಿನ ಬೆಳಕು ಚೆಲ್ಲಿದಾಗ,
ದುಃಖವೂ ದೂರ ಓಡಿಹೋಗುತ್ತದೆ.

ಒಂದು ನಗು ಮನ ಗೆಲ್ಲುತ್ತದೆ,
ಒಡೆದ ಮನಸು ಕೂಡ ಜೋಡಿಸುತ್ತದೆ.

ನಗು ಇಲ್ಲದ ಜೀವನ ಬತ್ತಿದ ತೋಟ,
ನಗು ಇದ್ದರೆ ಬದುಕೇ ಹಸಿರು ಹೊಲ.

ನಗುವೇ ನಮ್ಮ ಸೌಂದರ್ಯ ಆಭರಣ,
ಅದು ಮಾನವನ ನಿಜವಾದ ಗುರುತು ಚಿಹ್ನೆ.

ರಮೇಶ್

# ನಾಳೆ ಮಂಗಳನಾದದ ಮಧ್ಯೆ 14 ಜೋಡಿಗಳ ಹೊಸ ಬದುಕಿನ ಪಯಣ

## ಚಿಕ್ಕಕಡಬೂರು ಶ್ರೀ ಆದಿ ಬಸವೇಶ್ವರ ಜಾತ್ರೆಯಲ್ಲಿ ಸಾಮೂಹಿಕ ವಿವಾಹ & ಮಹಾರಥೋತ್ಸವ ಅದ್ದೂರಿ.

ನೈಜ್ಯ ದೆಸೆ ನ್ಯೂಸ್

ಮಸ್ಕಿ: ತಾಲೂಕಿನ ಚಿಕ್ಕಕಡಬೂರು ಗ್ರಾಮದಲ್ಲಿ ಆರಾಧ್ಯ ದೈವವಾದ ಐತಿಹಾಸಿಕ ಶ್ರೀ ಆದಿ ಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ನಾಳೆ ಭಕ್ತಿ, ಸಂಪ್ರದಾಯ ಮತ್ತು ಸಂಭ್ರಮ ಒಂದೇ ವೇದಿಕೆಯಲ್ಲಿ ಒಂದಾಗಲಿವೆ. ಈ ಬಾರಿ ಜಾತ್ರೆಯ ವಿಶೇಷ ಆಕರ್ಷಣೆಯಾಗಿ 14 ಜೋಡಿಗಳ ಸಾಮೂಹಿಕ ವಿವಾಹ ಕಾರ್ಯಕ್ರಮ ಮತ್ತು ಉಚ್ಚಾಯ ರಥೋತ್ಸವ ಭವ್ಯವಾಗಿ ಜರುಗಲಿವೆ.

ಜಾತ್ರೆಯ ಅಂಗವಾಗಿ ಸೋಮವಾರ ಬೆಳಿಗ್ಗೆ ಶ್ರೀ ಆದಿ ಬಸವೇಶ್ವರ ದೇವ–ರಿಗೆ ವಿವಿಧ ಪೂಜಾ ವಿಧಿವಿಧಾನಗಳು ನಡೆಯಲಿದ್ದು, ದೇವಸ್ಥಾನವು ಮದುವಣ–



ಗಿತ್ತಿಯಂತೆ ಅಲಂಕೃತಗೊಂಡಿದೆ. ಬಣ್ಣ ಬಣ್ಣದ ವಿದ್ಯುತ್ ದೀಪಾಲಂಕಾರಗಳಿಂದ ದೇವಾಲಯ ಕಂಗೊಳಿಸುತ್ತಿದ್ದು, ಭಕ್ತರ ಮನಸ್ಸಿನಲ್ಲಿ ಹಬ್ಬದ ಹರ್ಷದ ತರಂಗಗಳು ಹರಿದಾಡುತ್ತಿವೆ.ಏಪ್ರಿಲ್ 20 ರಂದು ಬೆಳಿಗ್ಗೆ 10 ಗಂಟೆಗೆ ಮಹಾ ಮಾಂಗಲ್ಯ ಕಾರ್ಯಕ್ರಮದ ಮೂಲಕ 14 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಡಲಿದ್ದು, ಅವರ ಬದುಕಿನ ಹೊಸ ಅಧ್ಯಾಯಕ್ಕೆ ದೈವೀ ಆಶೀರ್ವಾದ ದೊರೆಯಲಿದೆ.

ನಂತರ ಸಾಯಂಕಾಲ 5 ಗಂಟೆಗೆ ಉಚ್ಚಾಯ ರಥೋತ್ಸವ (ಮಹಾರಥ–ೋತ್ಸವ) ಅದ್ದೂರಿಯಾಗಿ ಜರುಗಲಿದ್ದು, ಈ ಮಹೋತ್ಸವಕ್ಕೆ ವಿವಿಧ ಮಠಗಳ ಮಠಾಧೀಶರು ಹಾಗೂ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಜಿಲ್ಲೆಯ ವಿವಿಧ ಭಾಗಗಳಿಂದ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಂದ ಸಾವಿರಾರು ಭಕ್ತರು ಆಗಮಿಸುವ ನಿರೀಕ್ಷೆಯಿದೆ.

ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀ ಆದಿ ಬಸವೇಶ್ವರ ದೇವರ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನ ಸಮಿತಿಯವರು ಮನವಿ ಮಾಡಿದ್ದಾರೆ. ಈ ಜಾತ್ರೆ ಕೇವಲ ಒಂದು ಉತ್ಸವವಲ್ಲ, ಹೃದಯಗಳನ್ನು ಜೋಡಿಸುವ ಸಂಪ್ರದಾಯದ ಸೇತುವೆಯಾಗಿದೆ; ಇಲ್ಲಿ ಘಂಟಾನಾದಗಳು ಮಾತ್ರ ಕೇಳಿಸುವುದಿಲ್ಲ, ಹೊಸ ಜೀವನಗಳ ಆರಂಭದ ಕಥೆಗಳು ಕೂಡ ಬರೆಯಲ್ಪಡುತ್ತವೆ.

ವರದಿ, ಸುರೇಶ ಬಳಗಾನೂರು.

## ಜಂಗಮರಹಳ್ಳಿ: ಸಮುದಾಯ ಭವನಕ್ಕೆ ಆರ್ ಬಸನಗೌಡ ತುರವಿಹಾಳ ಶಾಸಕರಿಂದ ಭೂಮಿ ಪೂಜೆ

ನೈಜ್ಯ ದೆಸೆ ನ್ಯೂಸ್

**ಹಾಲಾಪೂರ: ಸಮೀಪದ ಜಂಗಮರಳ್ಳಿಯಲ್ಲಿ ನಿರ್ಮಿತಿ ಕೇಂದ್ರದಿಂದ 50 ಲಕ್ಷ ರೂಪಾಯಿ ಮೊತ್ತದ ಸಮುದಾಯ ಭವನ ಭೂಮಿ ಪೂಜೆಯನ್ನು ಶಾಸಕ ಹಾಗೂ ಖಾದಿ ಗ್ರಾಮೋದ್ಯೋಗ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಆರ್ ಬಸನಗೌಡ ತುರವಿಹಾಳ ನೆರವೇರಿಸಿದರು.**



ನಂತರ ಮಾತನಾಡಿ ಈ ಒಂದು ಕಾಮಗಾ–ರಿಯನ್ನು ಬಹಳಷ್ಟು ಗುಣಮಟ್ಟದಿಂದ ನಿಗದಿತ ಸಮಯಕ್ಕೆ ಕೆಲಸ ಮಾಡಿ ಜನರಿಗೆ ನೀಡಬೇಕು, ಮಸ್ಕಿ ಕ್ಷೇತ್ರದಲ್ಲಿ ಅನೇಕ ಅಭಿವೃದ್ಧಿಪರ, ಜನಪರ ಕೆಲಸ ಮಾಡುತ್ತಿದ್ದೇವೆ, ವಿಶೇಷವಾಗಿ ಕುಡಿಯುವ ನೀರು, ರಸ್ತೆ, ಆರೋಗ್ಯ ವಿಚಾರದಲ್ಲಿ ಸರ್ಕಾರ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಪೂಜ್ಯರಾದ ಶ್ರೀ ದಂಡಗುಂಡಪ್ಪ ತಾತ, ಶ್ರೀ ಚಂದ್ರಮೌನೇಶ ತಾತ, ಶ್ರೀ ಮಹಾಂತೇಶ ತಾತ , ಮಸ್ಕಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ್ ಯದ್ದಲದಿನ್ನಿ, ಗ್ಯಾರಂಟಿ ಸಮಿತಿ ಅಧ್ಯಕ್ಷ ಮೈಬುಸಾಬ ಮುದ್ದಾಪುರ, ಇನ್ನು ಅನೇಕ ಮುಖಂಡರು, ಅಧಿಕಾರಿಗಳು, ಗುತ್ತಿಗೆದಾರರು ಇದ್ದರು.

# ಮಸ್ಕಿ: ಕಸಾಪದಿಂದ ಮಕ್ಕಳ ರಂಗ ಸಂಭ್ರಮ, ಹತ್ತು ದಿನ ವಿಶೇಷ ಬೇಸಿಗೆ ಶಿಬಿರ




ನೈಜ್ಯ ದೆಸೆ ನ್ಯೂಸ್

ಮಸ್ಕಿ: ತಾಲೂಕ ಕನ್ನಡ ಸಾಹಿತ್ಯ ಪರಿಷತ್, ಮಕ್ಕಳ ಸಾಹಿತ್ಯ ಪರಿಷತ್ತು ಮಸ್ಕಿ ಹಾಗೂ **ನರಸನಗೌಡ ಮೆಮೋರಿಯಲ್ ಶಾಲೆ ಸಹಭಾಗಿತ್ವದಲ್ಲಿ ಮಕ್ಕಳ ರಂಗ ಸಂಭ್ರಮ 2026 ಹತ್ತು ದಿನಗಳ ಕಾಲ ನಡೆಯುತ್ತಿದೆ.**

ಪಟ್ಟಣದ ಅನೇಕ ಸಂಪನ್ಮೂಲ ಶಿಕ್ಷಕರು ಪ್ರತಿದಿನ ಬಂದು ಯೋಗ ಧ್ಯಾನ, ಚಿತ್ರಕಲೆ, ಕರಕುಶಲ ಕಲೆ,ಮೋಜಿನ ಗಣಿತ,ವಿಜ್ಞಾನ ವಿಸ್ಮಯ, ದೇಶಿಯ ಆಟಗಳು, ಮಕ್ಕಳಿಗೆ ಕಥೆಗಳು,ಕವನ ರಚನೆ, ಏರೋಬಿಕ್ಸ್ ಹಾಗೂ ಹಾಡು ಮತ್ತು ನೃತ್ಯ, ನಾಟಕ ನಿರ್ದೇಶಕರಾದ ರಂಜಾನ್ ಸಾಬ ಉಳ್ಳಾಗಡ್ಡಿ ನಿತ್ಯ ನಾಟಕ ತರಬೇತಿ, ಹೀಗೆ ವಿವಿಧ ಸೃಜನಾತ್ಮಕ ಚಟುವಟಿಕೆಯ ಕಲಿಕೆಗಳನ್ನು ಕಲಿಸುತ್ತಿದ್ದಾರೆ. ಮಕ್ಕಳು ಉತ್ಸಾಹದಿಂದ ಖುಷಿಯಿಂದ ಎಲ್ಲಾ ಚಟುವಟಿಕೆಗಳ ಭಾಗವಹಿಸುತ್ತಿದ್ದಾರೆ.

ಈ ರಂಗಸಂಭ್ರಮ ಕಾರ್ಯಕ್ರಮವು ಜಿಲ್ಲೆಯಲ್ಲಿಯೇ ಅತ್ಯಂತ ಭಿನ್ನವಾಗಿದ್ದು ಮಕ್ಕಳು ಹಾಗೂ ಪಾಲಕರ ಗಮನ ಸೆಳೆದಿದೆ. ಎರಡು ಪರಿಷತ್ತಿನ ಅಧ್ಯಕ್ಷರು ಪದಾಧಿಕಾರಿಗಳು ಹಾಗೂ ಸಂಪನ್ಮೂಲ ಶಿಕ್ಷಕರು ಶಿಬಿರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಶಿಬಿರವನ್ನು ಮುನ್ನಡೆಸುತ್ತಿರುವುದು ಮಕ್ಕಳಿಗೆ, ಪಾಲಕ ಪೋಷಕರಿಗೆ ಸಂತೋಷದಾಯಕ ಎಂದು ಅನೇಕರು ಹೇಳಿದರು. ಈ ಸಂದರ್ಭದಲ್ಲಿ ಕಸಾಪ ಅಧ್ಯಕ್ಷೆ ವಿದ್ಯಾವತಿ ವನಕೆ, ಮಕ್ಕಳ ಸಾಹಿತಿಗಳಾದ ಗುಂಡರಾವ್ ದೇಸಾಯಿ, ಪ್ರಧಾನ ಕಾರ್ಯದರ್ಶಿ ಮಹೇಶ ಶಿಕ್ಷಕರು ಹಾಗೂ ಪದಾಧಿಕಾರಿಗಳು, ಶಿಕ್ಷಕ ಶಿಕ್ಷಕಿಯರು ಇದ್ದರು.

# ವಡವಾಟ್ಟಿ ಗ್ರಾಮದಲ್ಲಿ 100ಕ್ಕೂ ಹೆಚ್ಚು ಕಾರ್ಯಕರ್ತರು ಕಾಂಗ್ರೆಸ್ ಸೇರ್ಪಡೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಏಪ್ರಿಲ್ 18– ತಾಲೂಕು ಬಾಯದೊಡ್ಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ವಡವಾಟ್ಟಿ ಗ್ರಾಮದಲ್ಲಿ, ವಾಕೀಟಿ ಜಂಬಣ್ಣ ಅವರ ನೇತೃತ್ವದಲ್ಲಿ ನೂರಕ್ಕೂ ಹೆಚ್ಚು ಕಾರ್ಯಕರ್ತರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.**

ಈ ವೇಳೆ ಅವರು ನಗರ ವಿಧಾನಸಭಾ ಕ್ಷೇತ್ರದ ನಗರ ಬ್ಲಾಕ್ ಅಧ್ಯಕ್ಷರಾದ ಶ್ರೀನಿವಾಸ್ ರೆಡ್ಡಿ ಅವರನ್ನು ಭೇಟಿ ಮಾಡಿ, ಗ್ರಾಮದಲ್ಲಿ ಉದ್ಭವಿಸಿರುವ ವಿವಿಧ ಸಮಸ್ಯೆಗಳ ಕು–ರಿತು ಚರ್ಚಿಸಿದರು. ಸಮಸ್ಯೆಗಳಿಗೆ ಸ್ಪಂದಿಸಿದ ಶ್ರೀನಿವಾಸ್ ರೆಡ್ಡಿ ಅವರು, ವಡವಾಟ್ಟಿ ಗ್ರಾಮದ




ಸಮಸ್ಯೆಗಳನ್ನು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್. ಎಸ್. ಬೋಸರಾಜು ಅವರೊಂದಿಗೆ ಚರ್ಚಿಸಿ ಪರಿಹಾರ ಕಂಡುಹಿಡಿಯಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಗ್ರಾಮಾಭಿವೃದ್ಧಿಗೆ ಕಾಂಗ್ರೆಸ್ ಪಕ್ಷದ ನಾಯಕತ್ವದಲ್ಲಿ ಹೆಚ್ಚಿನ ಒತ್ತು ನೀಡಲಾಗುವುದು ಎಂದು ಅವರು ಹೇಳಿದರು. ಪಕ್ಷದ ತತ್ವ–ಸಿದ್ಧಾಂತಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದ ಗ್ರಾಮಸ್ಥರು ಹಾಗೂ ಕಾರ್ಯಕರ್ತರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು. ಈ ಬೆಳವಣಿಗೆ ಸ್ಥಳೀಯ ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ. ಈ ಸಂದರ್ಭದಲ್ಲಿ ವಾಕೀಟಿ ಜಂಬಣ್ಣ, ಬಿ.ಜಿ. ಅಂಜನೇಯ (ವಡವಾಟ್ಟಿ), ನರಸಿಂಹಲು, ತಯಪ್ಪ ಗುಪ್ಪೇಶ್, ಸಲಿ ತಿಮ್ಮಪ್ಪ, ತೇಲು ತಿಮ್ಮಪ್ಪ, ಬಡಲು ತಿಮ್ಮಪ್ಪ, ಟೊಂಗು ಮಾರೆಪ್ಪ, ಟೆಂಕಾಯಿಲು ತಿಮ್ಮಪ್ಪ, ಬುಡ್ಡ ಬಜಾರಪ್ಪ, ಬೊಳಬಂಡ್ಡಿ, ಸಂತೋಷ, ಜಮವಂತ, ನಲ್ಲನ್ನ ಸೇರಿದಂತೆ ಹಲವರು ಉಪಸ್ಥಿತರಿದ್ದರು.

**ವರದಿ ಖಾಜಾಹುಸೇನ್ ಬಾಬಾ ಜಾಲಹಳ್ಳಿ**

## ಆರ್.ಬಸನಗೌಡರಿಗೆ ಸಚಿವ ಸ್ಥಾನ ನೀಡಲು : ನಿಜಗುಣಿ ಸರ್ಜಾಪೂರ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಶಾಸಕ ಆರ್.ಬಸನಗೌಡ ತುರವಿಹಾಳ ಅವ–ರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಚಿವ ಸ್ಥಾನ ನೀಡಬೇಕು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯ ನಿಜಗುಣಿ ಸರ್ಜಾಪೂರ ಒತ್ತಾಯಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಜ್ಯ ಸಚಿವ ಸಂಪುಟದಲ್ಲಿ ಎರಡು ಸ್ಥಾನಗಳು ಖಾಲಿ ಇದ್ದು, ಇದೀಗ ಸಚಿವ ಸ್ಥಾನ ನೀಡುವ ಮೂಲಕ ಸಾಮಾಜಿ–ಕ ನ್ಯಾಯ ಎತ್ತಿ ಹಿಡಿಯಬೇಕು ಎಂದು ಒತ್ತಾಯಿಸಿದರು.**



ಆರ್.ಬಸನಗೌಡ್ರು ಓರ್ವ ನಿಷ್ಠಾವಂತ ರಾಜಕಾರಣಿ. ಸರಳತೆ, ಸಜ್ಜನಿಕೆ ಹಾಗೂ ರೈತಪರ ನಿಲುವುಗಳಿಂದ ಜನಮನ ಗೆದ್ದಿರುವ ಅವರು ಸಂಭಾವ್ಯ ಸಚಿವರ ಪಟ್ಟಿಯಲ್ಲಿ ಹೆಸರು ಹೊಂದಿದ್ದು, ಅವರಿಗೆ ಪ್ರಭಾವಿ ಖಾತೆ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ ಅವರಿಗೆ ಈ ಮೂಲಕ ಒತ್ತಾಯಿಸಿದ್ದಾರೆ.

# ಯುವಕರು ಊರಿನ ಅಭಿವೃದ್ಧಿಯ ಶಿಲ್ಪಿಗಳು: ಮಹಿಬೂಬ್ ಮದ್ಲಾಪುರ



ನೈಜ್ಯ ದೆಸೆ ನ್ಯೂಸ್

"ಯುವಕರು ಕ್ರೀಡೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಅತ್ಯುತ್ತಮ ಕ್ರೀಡಾಪಟುಗಳಾಗಿ ಹೊರಹೊಮ್ಮಬೇಕು, ಜಾತಿ, ಧರ್ಮ, ಮೇಲು–ಕೀಳು, ಸಣ್ಣವ ದೊಡ್ಡವ ಎಂಬ ಬೇಧ ಮರೆತು ಆಡುವಾಗ ಎಷ್ಟು ಚಂದ ಅನ್ನುತ್ತದೆ. ನಮ್ಮೂ–ರಿಗೆ ಇರುವ ರೆಡ್ ಕ್ರಿಮಿನಲ್ ಪಟ್ಟಿಯನ್ನು ತೆಗೆದು ಹಾಕುವ ಮಹಾತ್ಕಾರ್ಯ ಯುವಕರಿಂದ ಮಾತ್ರ ಸಾಧ್ಯ. ನೀವು ನಮ್ಮೂರಿನ ಭವಿಷ್ಯ, ಯುವಕರೇ ನಿಮ್ಮಿಂದ ಊರಿನ ಅಭಿವೃದ್ಧಿ ಸಾಧ್ಯ, ನೀವೇ ಶಿಲ್ಪಿಗಳು.

ಜೊತೆಗೆ ದುಶ್ಚಟಗಳಿಗೆ ಬಲಿಯಾಗದೇ ತಂದೆ ತಾಯಿಗಳಿಗೆ ಒಳ್ಳೆಯ ಮಕ್ಕಳಾಗಿ ದೇಶದ ಅತ್ಯುತ್ತಮ ಪ್ರಜೆಗಳಾಗಿ ಇತಿಹಾಸ ಸೃಷ್ಟಿಸಿ" ಎಂದು ಹೇಳಿದರು. ಕ್ರೀಡೆಯಲ್ಲಿ ನಾವೆಲ್ಲಾ ಒಂದು ಎಂಬ ಭಾವ ತುಂಬಿರಲಿ, ಪ್ರತಿಯೊಬ್ಬರು ಕ್ರೀಡಾ ಮನೋಭಾವ ಬೆಳೆಸಿಕೊಂಡು ಸ್ಪರ್ಧೆಯಲ್ಲಿ ಭಾಗಿಯಾಗಬೇಕು ನಾವೆಲ್ಲಾ ಒಂದು ಎಂಬ ಭಾವ ತುಂಬಿಕೊಂಡು ಆಡಬೇಕು ಗೆದ್ದವರಿಗೆ ಅಭಿನಂದನೆಗಳು ಸೋತವರಿಗೆ ಬೆಟರ್ ಲಕ್ ನೆಕ್ಸ್ಟ್ ಎಂದು ಪ್ರಥಮ ಬಹುಮಾನ ದಾನಿ ತಿಮ್ಮನಗೌಡ ಶುಭಾಷಯ ಕೋರಿದರು. ಮದ್ಲಾಪುರ ಕ್ರಿಕೇಟ್ ಪ್ರೀಮಿಯರ್ ಲೀಗ್ ಸಿಸಜ್ –2 ರ ಫೈನಲ್ ಪಂದ್ಯವು ಊರಿನ ಗುರುದೇವ್ ಕ್ರೀಡಾಂಗಣದಲ್ಲಿ ಜರುಗಿತು.

ಎಂ. ವಿರಾಟ್ ಚಾಲೆಂಜರ್ಸ್ ಮಾಲಿಕ ದ್ವಿತೀಯ ಬಹುಮಾನ ವಿತರಕರಾದ ಶೀವುಕುಮಾರ್ ಸಾಲಿ "ಮಾತನಾಡಿ ನಮ್ಮೂರು ಕ್ರಿಕೇಟ್ ನಲ್ಲಿ ಒಳ್ಳೆಯ ಸಾದನೆ ಮಾಡಬೇಕಾದರೆ ನಿಮ್ಮಲ್ಲಿ ಆತ್ಮೀಯತೆ ಇರಬೇಕು ಸ್ಪೂರ್ತಿಯಾಗಿರಬೇಕು ದೇಹ ಚನ್ನಾಗಿಟ್ಟುಕೊಳ್ಳಬೇಕು ಎಂದರು. ಒಟ್ಟು ಎಂಟು ತಂಡಗಳು ಭಾಗಿಯಾಗಿ ಅದರಲ್ಲಿ ಎರಡು ತಂಡ ಫೈನಲ್ ಪ್ರವೇಶ ಪಡೆದವು ಚಾಂಪಿಯನ್ ತಂಡವಾಗಿ ವಿನಯ್ ನಾಯಕ ಮಾಲಿಕತ್ವದ ಎಂ. ಬುಲ್ಡೋಜರ್ಸ್ ರನ್ನರಫ್ ಅಜಿತ್ ಪಾಟೀಲ್ ಎಂ. ಚಾಲೆಂಜರ್ಸ್ ತಂಡ ಪಡೆದುಕೊಂಡಿತು.

ವೇದಿಕೆಯಲ್ಲಿ ಎಂ. ಇಂಡಿಯನ್ ತಂಡದ ಜಿ. ಈರಣ್ಣ ನಾಯಕ, ಎಂ. ಕಿಂಗ್ ಎಲೆವನ್ ನ ಯಲ್ಲೇಶ, ಎಂ. ವಿರಾಟ್ ನ ಗ್ರಾಮ ಪಂಚಾಯತ್ ಸದಸ್ಯ ಬಸವರಾಜ, ಎಂ. ಸುಪರ್ ಕಿಂಗ್ಸ್ ಹನುಮಂತ, ಎಂ. ತ್ರಿಸ್ಕ್ವೀ ಭೀಮೇಶ್, ದಾನಿ ಬಾಲಯ್ಯ ಬಾರ್ಕೇರ್, ಆಯೋಜ–ಕರಾದ ರವಿಭೋವಿಕರ್, ಅಯ್ಯೊಪ್ಪ,ಸುಭಾಷ, ಕೃಷ್ಣ, ಸೋನ, ಅಶೋಕ, ಜಾನಿ, ಅಂಬಣ್ಣ, ವಿಶ್ವ, ಕಾಮೆಂಟರಿ ಶಿವಮೂರ್ತಿ, ಸ್ಕೋರರ್ ಅನ್ವರ್ ಮಹಾದೇವ, ನಿರೂಪಣೆಯಲ್ಲಿ ವೆಂಕಟೇಶ ಬಿ.

# ಸ್ವಯಂ ಮಾಹಿತಿ ಪಡೆಯಬಹುದಾದ ಮಿಷನ್ ಏಡ್ಸ್ ಸುರಕ್ಷಾ ಅಭಿಯಾನ ಹಾಗೂ 100 ದಿನಗಳ ಕ್ಷಯರೋಗ ಪತ್ತೆ ಅಭಿಯಾನ ಯಶಸ್ವಿಗೊಳಿಸಿ: ಈಶ್ವರ ಕುಮಾರ ಕಾಂದೂ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಯುವ ಜನತೆಯ ಆರೋಗ್ಯ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಿ ಹೆಚ್ಐವಿ ಸೋಂಕಿನ ಸಾಧ್ಯತೆಗಳನ್ನು ಆರಂಭದಲ್ಲಿಯೇ ಗುರ್ತಿಸಲು ಯಾವ ಸಂಕೋಚವಿಲ್ಲದೆ ಮೊಬೈಲ್ ಮೂಲಕ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ವೈಯಕ್ತಿಕ ಸ್ಥಿತಿ ತಿಳಿ ಯಲು ಜಿಲ್ಲೆಯಾದ್ಯಂತ ಜಾಗೃತಿ ನೀಡಿ ಎಂದು ಜಿಲ್ಲಾ ಪಂಚಾಯತನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಈಶ್ವರ ಕುಮಾರ ಕಾಂದೂ ವಿವಿಧ ಇಲಾಖೆಯ ಜಿಲ್ಲಾ ಹಾಗೂ ತಾಲೂಕಾ ಮಟ್ಟದ ಅಧಿಕಾರಿಗಳಿಗೆ ತಿಳಿಸಿದರು.**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದ ತುಂಗಾ ಸಭಾಂಗಣದಲ್ಲಿ ಜರುಗಿದ ಜಿಲ್ಲಾ ಅರೋಗ್ಯ ಸಂಘದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಜಾಗೃತಿ ಭಿತ್ತಿಪತ್ರ ಬಿಡುಗಡೆಗೊಳಿಸಿ ಮಾತನಾಡುತ್ತಾ,




ಅಭಿಯಾನದಡಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಪ್ರಶ್ನೋತ್ತರದಲ್ಲಿ ಸ್ವಯಂ ಉತ್ತರಗಳಿಂದ, ಸೋಂಕು ಹರಡಬಹುದಾದ ಸಾಧ್ಯತೆಗಳಿದ್ದಲ್ಲಿ ಕನಿಷ್ಠ ಶೇಖಡ 95 ರಷ್ಟು ಜನ ತಪಾಸಣೆ ಮಾಡಿಸಿಕೊಳ್ಳುವುದು, ಖಚಿತಪಟ್ಟ ಸೋಂಕಿತರಲ್ಲಿ ಶೇಕಡ 95 ರಷ್ಟು ಜನರನ್ನು ಎಆರ್‌ಟಿ ಕೇಂದ್ರಗಳಿಗೆ ಚಿಕಿತ್ಸೆಗೆ ಬರುವಂತೆ ಮಾಡುವುದು ಹಾಗೂ ಸೋಂಕಿತರಾಗಿ ಎಆರ್‌ಟಿ ಚಿಕಿತ್ಸೆ ಪಡೆಯುವರಲ್ಲಿ ಶೇಖಡ 99 ರಷ್ಟು ಜನರನ್ನು ಸದಾ ನಿಗಾವಣೆ, ಆಪ್ತಸಮಾಲೋಚನೆಯಿಂದ ಚಿಕಿತ್ಸೆ ಬಿಡದಂತೆ ಆರೋಗ್ಯ ಶಿಕ್ಷಣ ನೀಡುವ ಮೂಲಕ ವೈರಲ್ ಲೋಡ್ ಹೆಚ್ಚಾಗದಂತೆ ಅಭಿಯಾನದ ಮೂಲ ಉದ್ದೇಶವನ್ನು ಯಶಸ್ವಿಗೊಳಿಸಲು ಸೂಚಿಸಿದರು.

100 ದಿನಗಳ ಕ್ಷಯಮುಕ್ತ ಅಭಿಯಾನಕ್ಕೆ ಸೂಕ್ತ ಯೋಜನೆ ರೂಪಿಸಿ ಜಿಲ್ಲೆಯಲ್ಲಿ ಕ್ಷಯರೋಗ ಪ್ರಕರಣಗಳ ಅನುಸಾರ ಹೆಚ್ಚು ನಿಗಾ ವಹಿಸಬೇಕಾದ 209 ಗ್ರಾಮಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕುಟುಂಬದ ಎಲ್ಲ ಸದಸ್ಯರು ಸೇರಿದಂತೆ ಸೋಂಕಿಗೆ ಒಳಗಾಗಬಹುದಾದ ಎಲ್ಲರನ್ನೂ ಜಾಗೃತಿ ನೀಡಿ ಕಫ ಪರೀಕ್ಷೆ, ಹ್ಯಾಂಡ್‌ಹೆಲ್ಡ್ ಎಕ್ಸ್‌ರೇ ಮಿಷಿನ್, ಮುಂತಾದವುಗಳಿಂದ ಪರೀಕ್ಷೆಗೆ ಒಳಪಡಿಸಿ ರೋಗ ಖಚಿತವಪಟ್ಟವರಿಗೆ ಉಚಿತ ಚಿಕಿತ್ಸೆಯನ್ನು ನೀಡಿ ಗುಣಪಡಿಸುವವರೆಗೆ ನಿಗಾ ವಹಿಸಿ, ಅರ್ಹ ವ್ಯಕ್ತಿಗಳಿಗೆ ನಿಕ್ಷಯ್ ಮಿತ್ರ ಅಡಿ ದಾನಿಗಳಿಂದ ಪೌಷ್ಟಿಕ ಆಹಾರ ಒದಗಿಸಲು ಸೂಚಿಸಿ, 100 ದಿನಗಳ ಅಭಿಯಾನದಲ್ಲಿ ಉಚಿತ ತಪಾಸಣೆ ಶಿಬಿರಗಳನ್ನು ಏರ್ಪಡಿಸಿ, 2030 ರ ಒಳಗೆ ಕ್ಷಯರೋಗ ಮುಕ್ತ ಭಾರತದ ಗುರಿ ತಲುಪಲು ಗ್ರಾಮಪಂಚಾಯತ, ಸ್ಥಳೀಯ ಸಂಸ್ಥೆಗಳ, ವಿವಿಧ ಇಲಾಖೆಗಳ ಸಹಕಾರ ಪಡೆದು ಯಶಸ್ವಿಗೊಳಿಸಲು ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರ ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ ವಿಜಯಶಂಕರ್, ಉಪನಿರ್ದೇಶಕರು, ಡಬ್ಲ್ಯುಸಿಡಿ ಇಲಾಖೆ ನವೀನ್‌ಕುಮಾರ್, ಜಿಲ್ಲಾ ಆಯುಷ್ ಅಧಿಕಾರಿ ಡಾ ಶಂಕರ್‌ಗೌಡ, ಡಿಪಿಡಿಓ ಡಾ ಚಂದ್ರಶೇಖರಯ್ಯ ಸ್ವಾಮಿ, ಆರ್‌ಸಿಹೆಚ್ ಅಧಿಕಾರಿ ಡಾ ನಂದಿತಾ ಎಮ್. ಎನ್. ಡಿಎಸ್‌ಓ ಹಾಗೂ ಡಿಪಿಎಮ್‌ಓ ಡಾ ಗಣೇಶ್ ಕೆ, ಎನ್‌ಫೋರ್ಸ್‌ಮೆಂಟ್ ಅಧಿಕಾರಿ ಡಾ ಶಿವಕುಮಾರ್ ನಾರಾ, ಡಿಟಿಓ ಡಾ ಮಹಮ್ಮದ್ ಶಾಕೀರ್ ಮೊಹಿಯುದ್ದೀನ್, ನಿರೂಪಣಾಧಿಕಾರಿ ಡಾ ಕುಮಾರ್ ಸೇರಿದಂತೆ ಶಿಕ್ಷಣ ಇಲಾಖೆ ಅಧಿಕಾರಿ, ಎಲ್ಲ ತಾಲೂಕಾ ಆರೋಗ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾ–ರಿಗಳು ಹಾಗೂ ಇತರರು ಉಪಸ್ಥಿತರಿದ್ದರು.


## ನೇಮಕಾತಿ ಪ್ರಕಟಣೆ

KSDA ನೇಮಕಾತಿ 2026–890 ಕೃಷಿ ಅಧಿಕಾರಿ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಏಪ್ರಿಲ್ 18, 2026 ಏಖಆಂ ನೇಮಕಾತಿ 2026: 890 ಸಹಾಯಕ ಕೃಷಿ ಅಧಿಕಾರಿ (AAO), ಕೃಷಿ ಅಧಿಕಾರಿ (AO) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ರಾಜ್ಯ ಕೃಷಿ ಇಲಾಖೆಯು ಏಪ್ರಿಲ್ 2026 ರ KEA ಅಧಿಕೃತ ಅಧಿಸೂಚನೆಯ ಮೂಲಕ ಕೃಷಿ ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ಮೇ 10, 2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 19 ಏಪ್ರಿಲ್ 2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10 ಮೇ 2026 ಆನ್‌ಲೈನ್‌ನಲ್ಲಿ ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 12 ಮೇ 2026 ಪರೀಕ್ಷಾ ದಿನಾಂಕ: 6 ಮತ್ತು 7 ಜೂನ್ 2026 ಅಧಿಕೃತ ವೆಬ್‌ಸೈಟ್: raitamitra.karnataka.gov.in

### ಹಡಗುಗಳ ಮೇಲೆ ಇರಾನ್ ಮತ್ತೆ ಗುಂಡಿನ ದಾಳಿ :ಹಾರ್ಮುಜ್ ಜಲಸಂಧಿ ಸಂಪೂರ್ಣ ಬಂದ್

ನೈಜ್ಯ ದೆಸೆ ನ್ಯೂಸ್

**ಕೈರೋ: ಅಮೆರಿಕದ ಬಂದರುಗಳ ನಿರ್ಬಂಧದ ವಿರುದ್ಧ ಪ್ರತಿಕ್ರಿಯೆಯಾಗಿ, ಇರಾನ್ ಮತ್ತೆ ಹಾರ್ಮುಜ್ ಸಮುದ್ರ ಜಲಸಂಧಿಯನ್ನು ಮುಚ್ಚಿ, ಅಲ್ಲಿ ಸಾಗಲು ಪ್ರಯತ್ನಿಸಿದ ಹಡಗುಗಳ ಮೇಲೆ ಗುಂಡಿನ ದಾಳಿ ನಡೆಸಿದ್ದರಿಂದ ಉದ್ವಿಗ್ನತೆ ಮತ್ತಷ್ಟು ಹೆಚ್ಚಿದೆ. ಅಮೆರಿಕ ತನ್ನ ನಿರ್ಬಂಧವನ್ನು ಹಿಂಪಡೆಯುವವರೆಗೆ ಈ ಸಮುದ್ರ ಸಂಕುಲ ಮುಚ್ಚಿರುತ್ತದೆ ಎಂದು ಇರಾನ್ ಕ್ರಾಂತಿಕಾರಿ ಗಾರ್ಡ್ ನೌಕಾಪಡೆ ತಿಳಿಸಿದೆ.**



ಪರ್ಷಿಯನ್ ಗಲ್?ಫ ಮತ್ತು ಓಮನ್ ಸಮುದ್ರದ ನಿಲ್ದಾಣದಲ್ಲಿರುವ ಯಾವುದೇ ಹಡಗು ಚಾಲನೆ ಮಾಡಬಾರದು. ಹಾರ್ಮುಜ್ ಸಮುದ್ರ ಜಲಸಂಧಿಯತ್ತ ಸಮೀಪಿಸುವುದನ್ನು ಶತ್ರುವಿಗೆ ಸಹಕಾರವೆಂದು ಪರಿಗಣಿಸಲಾಗುತ್ತದೆ ಮತ್ತು ಗುರಿಯಾಗುತ್ತದೆ ಎಂದು ಎಚ್ಚರಿಸಿದೆ. ಪ್ರಪಂಚದ ಒಟ್ಟು ತೈಲ ಸಾಗಣೆಯ ಸುಮಾರು ಐದನೇ ಒಂದು ಭಾಗ ಈ ಮಾರ್ಗದ ಮೂಲಕ ಸಾಗುತ್ತದೆ. ಈ ಮಾರ್ಗದಲ್ಲಿ ಹೊಸ ದಾಳಿಗಳು ಜಾಗತಿಕ ಇಂಧನ ಸಂಕಷ್ಟವನ್ನು ಮತ್ತಷ್ಟು ಗಂಭೀರಗೊಳಿಸುವ ಸಾಧ್ಯತೆಯಿದೆ ಹಾಗೂ ದೇಶಗಳನ್ನು ಮತ್ತೆ ಸಂಘರ್ಷದ ದಿಕ್ಕಿನಲ್ಲಿ ತಳ್ಳಬಹುದು. ಸೂಕ್ಷ್ಮ ಯುದ್ಧ ವಿರಾಮ ಒಪ್ಪಂದ ಬುಧವಾರಕ್ಕೆ ಕೊನೆಗೊಳ್ಳಲಿದ್ದು, ಇರಾನ್ ಹೇಳುವಂತೆ ಅಮೆರಿಕದಿಂದ ಹೊಸ ಪ್ರಸ್ತಾವನೆಗಳು ಬಂದಿವೆ. ಪಾಕಿಸ್ತಾನದ ಮಧ್ಯವರ್ತಿತ್ವದಲ್ಲಿ ಮತ್ತೊಂದು ನೇರ ಮಾತಕತೆ ನಡೆಸಲು ಪ್ರಯತ್ನಗಳು ನಡೆಯುತ್ತಿವೆ. ಇದಕ್ಕೂ ಮೊದಲು, ಇರಾನ್ ಸಂಂ–ಯುಕ್ತ ಸೇನಾ ಕಮಾಂಡ್ ಹಾರ್ಮುಜ್ ಸಮುದ್ರ ಸಂಕುಲದ ನಿಯಂತ್ರಣ ಮತ್ತೆ ನಮ ವಶಕ್ಕೆ ಬಂದಿದೆ ಎಂದು ಹೇಳಿತ್ತು. ಬ್ರಿಟಿಷ್ ಸೇನೆಯ ಯುನೈಟೆಡ್ ಕಿಂಗ್‌ಡಮ್ ಮೆರಿಟೈಮ್ ಟ್ರೇಡ್ ಆಪರೇಷನ್?ಸಕೇಂದ್ರದ ಪ್ರಕಾರ, ಕ್ರಾಂತಿಕಾರಿ ಗಾರ್ಡ್ ದೋಣಿಗಳು ಒಂದು ಟ್ಯಾಂಕರ್ ಮೇಲೆ ಗುಂಡಿನ ದಾಳಿ ನಡೆಸಿದ್ದು, ಮತ್ತೊಂದು ಕಂಟೈನರ್ ಹಡಗಿಗೆ ಅಪ–ರಿಚಿತ ವಸ್ತು ತಗುಲಿ ಕೆಲವು ಕಂಟೈನರ್‌ಗಳಿಗೆ ಹಾನಿಯಾಗಿದೆ. ಭಾರತದ ವಿದೇಶಾಂಗ ಸಚಿವಾಲಯವು ಎರಡು ಭಾರತೀಯ ಧ್ವಜದ ವ್ಯಾಪಾರ ಹಡಗುಗಳ ಮೇಲೆ ನಡೆದ ಗುಂಡಿನ ದಾಳಿಯನ್ನು ಗಂಭೀರ ಘಟನೆ ಎಂದು ಪರಿಗಣಿಸಿ, ನವದೆಹಲಿಯಲ್ಲಿನ ಇರಾನ್ ರಾಯಭಾರಿಯನ್ನು ಕರೆಸಿಕೊಂಡು ಘಟನೆ ಬಗ್ಗೆ ವಿವರಿಸಲಾಗಿದೆ. ವಿಶೇಷವಾಗಿ, ಈ ಹಿಂದೆ ಕೆಲವು ಭಾರತಮುಖಿ ಹಡಗುಗಳಿಗೆ ಇರಾನ್ ಅನುಮತಿ ನೀಡಿದ್ದ ನಂತರವೂ ಈ ಘಟನೆ ನಡೆದಿದೆ. ಯುದ್ಧ ಜಾಗತಿಕ ಆರ್ಥಿಕತೆಯ ಮೇಲೆ ದೊಡ್ಡ ಪರಿಣಾಮ ಬೀರುವುದರ ಜೊತೆಗೆ ಅಮೆರಿಕ ಅಧ್ಯಕ್ಷ ಡೊನಾಲ್?ಡ ಟ್ರಂಪ್ ಮೇಲೆ ರಾಜಕೀಯ ಒತ್ತಡ ತರುತ್ತದೆ.ಅಮೆರಿಕದ ದೃಷ್ಟಿಯಿಂದ, ಈ ನಿರ್ಬಂಧ ಇರಾನ್‌ನ ಈಗಾಗಲೇ ದುರ್ಬಲಗೊಂಡ ಆರ್ಥಿಕತೆಯನ್ನು ಇನ್ನಷ್ಟು ಕುಗ್ಗಿಸಬಹುದು. ಇರಾನ್‌ನ ಹೊಸ ಪರಮೋನ್ನತ ನಾಯಕ ಆಯತೊಲ್ಲಾ ಮೊಜ್ತಬಾ ಖಮೇನಿ ಇದಕ್ಕೆ ಕಠಿಣ ಹೇಳಿಕೆ ನೀಡಿ, ನಮ ನೌಕಾಪಡೆ ಶತ್ರುಗಳಿಗೆ ಕಹಿ ಸೋಲು ನೀಡಲು ಸಿದ್ಧವಾಗಿದೆ ಎಂದು ಹೇಳಿದ್ದಾರೆ. ಇಸ್ರೇಲ್ ಮತ್ತು ಲೆಬನಾನ್‌ನ ಹೆಜ್ಬೊಲ್ಲಾ ಸಂಘಟನೆ ನಡುವೆ 10 ದಿನಗಳ ಯುದ್ಧ ವಿರಾಮ ಘೋಷಣೆಯಾದ ನಂತರ, ಇರಾನ್ ವಾಣಿಜ್ಯ ಹಡಗುಗಳಿಗೆ ಸಮುದ್ರಸಂಕುಲವನ್ನು ತೆರೆಯುವುದಾಗಿ ಘೋಷಿಸಿತ್ತು. ಇದರಿಂದ ತೈಲ ಬೆಲೆಗಳು ಕುಸಿದಿದ್ದವು. ಆದ–ರೆ, ಡೊನಾಲ್?ಡ ಟ್ರಂಪ್ ಅಮೆರಿಕದ ನಿರ್ಬಂಧ ಪೂರ್ಣ ಪ್ರಮಾಣದಲ್ಲಿ ಮುಂದುವರಿಯುತ್ತದೆ ಎಂದು ಹೇಳಿದ್ದಾರೆ. ಇರಾನ್ ಒಪ್ಪಂದಕ್ಕೆ ಬರುವವರೆಗೆ ಅದು ಮುಂದುವ–ರಿಯುತ್ತದೆ ಎಂದರು. ಪಾಕಿಸ್ತಾನದಲ್ಲಿ ನಡೆದ ನೇರ ಮಾತುಕತೆ ಫಲಿತಾಂಶವಿಲ್ಲದೆ ಮುಗಿದ ನಂತರ ಈ ನಿರ್ಬಂಧ ಹೇರಲಾಗಿತ್ತು. ಅಮೆರಿಕ ಸೆಂಟ್ರಲ್ ಕಮಾಂಡ್ ಹೇಳುವಂತೆ ನಿರ್ಬಂಧದ ಬಳಿಕ ಅಮೆರಿಕ ಪಡೆಗಳು 23 ಹಡಗುಗಳನ್ನು ಹಿಂದಕ್ಕೆ ಕಳುಹಿಸಿವೆ. ಇರಾನ್ ಉಪ ವಿದೇಶಾಂಗ ಸಚಿವ ಸಯೀದ್ ಖತೀಬ್ಜಾದೆ ಅವರು ಅಮೆರಿಕದ ತಪ್ಪು ಲೆಕ್ಕಾಚಾರಗಳು ಜಾಗತಿಕ ಆರ್ಥಿಕತೆಯನ್ನು ಅಪಾಯಕ್ಕೆ ತಳ್ಳುತ್ತಿವೆ ಎಂದು ಹೇಳಿದ್ದಾರೆ. ಇರಾನ್‌ನ ಸುಪ್ರೀಂ ನ್ಯಾಷನಲ್ ಸೆಕ್ಯುರಿಟಿ ಕೌನ್ಸಿಲ್ ಈ ನಿರ್ಬಂಧವನ್ನು ಯುದ್ಧ ವಿರಾಮ ಉಲ್ಲಂಘನೆ ಎಂದು ಕರೆದಿದೆ. ಕ್ರಾಂತಿಕಾರಿ ಗಾರ್ಡ್ ನೌಕಾಪಡೆಯು ಯಾವುದೇ ಹಡಗು ಸಂಚಾರಕ್ಕೂ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದೆ. ಈ ಬೆಳವಣಿಗೆಗಳು ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದರ್ ಅಮೆರಿಕ ಮತ್ತು ಇರಾನ್ ನಡುವೆ ಭಿನ್ನಾಭಿಪ್ರಾಯಗಳನ್ನು ನಿವಾ–ರಿಸಲು ಪ್ರಯತ್ನಿಸುತ್ತಿದ್ದೇವೆ ಎಂದು ಹೇಳಿದ ಕೆಲವೇ ಗಂಟೆಗಳ ಬಳಿಕ ಸಂಭವಿಸಿವೆ. ಮುಂದಿನ ವಾರದ ಆರಂಭದಲ್ಲಿ ಮತ್ತೊಂದು ಸುತ್ತಿನ ಮಾತುಕತೆಗೆ ಪಾಕಿಸ್ತಾನ ಆತಿಥ್ಯ ವಹಿಸುವ ನಿರೀಕ್ಷೆಯಿದೆ.

# ಶೋಷಿತರ ಸ್ವರ ಸಮಾನತೆಯ ಸಂತ–ವಿಶ್ವಗುರು ಬಸವಣ್ಣ

ನೈಜ್ಯ ದೆಸೆ ನ್ಯೂಸ್

**ಬಸವಣ್ಣನವರು ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿಯಲ್ಲಿ ತಂದೆ ಮಾದರಸ, ತಾಯಿ ಮಾದಲಂಬಿಕೆ, ದಂಪತಿಗಳಿಗೆ ಜನಿಸಿದರು, 12 ವರ್ಷಗಳ ಕಾಲ ಕೂಡಲ ಸಂಗಮದಲ್ಲಿ ಅಧ್ಯಾಯನ ಮಾಡಿದರು ನಂತರ ಕುಲಿಶಾ ಪಶುಪಾಟ ಸಂಪ್ರದಾಯದ ಒಂದು ಶೈವಕಲಿಕೆಯಲ್ಲಿ ಸಂಗಮೇಶ್ವರದಲ್ಲಿ ಮುಗಿಸಿದರು. ಬಸವಣ್ಣ ತನ್ನ ತಾಯಿ ಕಡೆಯಿಂದ ಸಹೋದರಿ ಸಂಬಂದಿಯನ್ನು ಮದುವೆಯಾದರು.**

ಸಾಮಾಜಿಕ ಕ್ರಾಂತಿಯ ಹರಿಕಾರ ಬಸವಣ್ಣ ನವರನ್ನು ಕರ್ನಾಟಕದ ಮಾರ್ಟಿನ್ ಲೂಥರ್ ಎಂದು ಕರೆಯುತ್ತಾರೆ. ಇವರು ಸಾಮಾಜಿಕ ಸುಧಾರಕರಾಗಿದ್ದರು. ತಮ್ಮ ದನಗಳ ಮೂಲಕ ಸಾಮಾಜಿಕ ಹರಿವು ಹರಡಿದರು. ಲಿಂಗತಾರತದ್ದಯ್ಯ, ಸಾಮಾಜಿ–ಕ ತಾರತಮ್ಯ, ಮೂಡನಂಬಿಕೆಗಳನ್ನು. ಅನುಭವ ಮಂಟಪ (ಆಧ್ಯಾತ್ಮಿಕ ಅನುಭವ ಭವನ) ಸ್ಥಾಪಿಸಿ (ಈಗಿನ ವಿಧಾನಸಭೆ.ಲೋಕಸಭೆ ಮಾದರಿ) ಇಲ್ಲಿ ಎಲ್ಲಾ ಸಾಮಾಜಿಕ ಆರ್ಥಿಕ ಹಿನ್ನಲೆಯ ಪುರುಷರು ಮತ್ತು ಮಹಿಳೆಯರು ಆಧ್ಯಾತ್ಮಿಕ ಮತ್ತು ಪ್ರಾಪಂಚಿಕ ಪ್ರಶ್ನೆಗಳನ್ನು ಮುಕ್ತವಾಗಿ ಚರ್ಚಿಸಲು ಅವಕಾಶ ಮಾಡಿಕೊಟ್ಟರು



ಬಸವಣ್ಣನವರ ಜೊತೆ 770 ಅಮರ ನಾಂಗಳು, ಇದ್ದರೆಂದು ಮತ್ತು 1 ಲಕ್ಷ 96000 ಸಾವಿರ ಶರಣರು ಇದ್ದಾರೆಂದು ಹೇಳಲಾಗಿದೆ. ಬಸವಣ್ಣನವರು ದೃಷ್ಟಿಯಲ್ಲಿ ದೇವರು ಮಾನವರಲ್ಲಿ ಇದ್ದಾನೇಯ ಹೊರತು, ಗುಡಿ ಗುಂಡಾರಗಳಲ್ಲಿ ಅಲ್ಲ ಕೆಲಸಮಾಡಿ ಜೀವನ ನಡೆಸಬೇಕು.

ಆಲಸ್ಯ ಜೀವನ ಸಲ್ಲ, ಸುಳ್ಳು ಹೇಳುವುದು, ವಂಚಿಸುವುದು, ಕೊಲೆ ಸುಲಿಗೆ ಮಾಡುವುದು ಪ್ರಾಣಿ ಬಲಿ ನೀಡುವು, ಪರಧನ ಹರಣ, ಪರ ಸ್ತ್ರೀ ವ್ಯಾಮೋಹ ಎಂಬುವುದು ಘೋರ ಅಪರಾದ ಎಂದು ಹೇಳಿದರು. ಕೆಲಸದಲ್ಲಿ ಮೇಲು ಅಥವಾ ಕೀಳು ಎಂಬುದಿಲ್ಲ.

ಪುರುಷನಂತೆ ಮಹಿಳೆಗೂ ವಿದ್ಯಾಭ್ಯಾಸದ ಮತ್ತು ತನ್ನ ಜೀವನವನ್ನು ರೂಪಿಸಿಕೊಳ್ಳುವ ಹಕ್ಕಿದೆ. ಹೀಗೆ ಸಮಾದತೆ, ಕಾಯಕ, ದಾಸಹೋಹ ತತ್ವಗಳನ್ನು ಸ್ವೀಕರಿಸುವ ಮತ್ತು ಆಚರಿಸುವ ಯಾರೂ ಬೇಕಾದರೂ ಶಿವ ಶರಣರಾಗ ಬಹುದು ಎಂದು ಬಸವಣ್ಣವರು ಸಾರಿದರು. ಪೊಳ್ಳು ದೇವರುಗಳನ್ನು ಸುತ್ತಿಸುತ್ತಿದ್ದ ಮತ್ತು ಪುರೋಹಿತಶಾಹಿಯಿಂದ ನಿರಂತರವಾಗಿ ವಂಚನೆಗೊಳಗಾಗುತ್ತಿದ್ದ ಜನತೆಗೆ ಬಸವಣ್ಣನವರು ಹೋಸ ಜೀವನ ನೀಡಿದರು.

ಜಾತಿ, ಮತ, ಲಿಂಗಗಳ ಭೇದವನ್ನು ಸಿರಸ್ಕರಿಸಿದ ಬಸವಣ್ಣನವರು ಸಾಮಾಜಿಕ ಕ್ರಾಂತಿಗೆ ಕಾರಣವಾದರು. ಬಸವಣ್ಣನವರನ್ನು ಜಗಜ್ಯೋತಿ ಬಸವೇಶ್ವರ, ಕಾಂತಿಯೋಗಿ ಬಸವಣ್ಣು ಭಕ್ತಿ ಭಂಡಾರಿ ಬಸವಣ್ಣ, ಮಹಾ ಮಾನವಜನಎಂದಿ ಎಂದು ಕರೆಯಲಾಗುತ್ತದೆ. ಮಾನವಿಯತೆ, ಕಾಯಕ ನಿಷ್ಠೆ ಧರ್ಮದ ಬುನಾದಿಯಾಗಬೇಕು ಎಂದು ಬಲವಾಗಿ ನಂಬಿದ್ದರು. ಬಸವಣ್ಣ ತಮ್ಮ ವಚನಗಳ ಮೂಲಕ ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲವಯ್ಯ, ಅಯ್ಯ ಎಂದರೆ ಸ್ವರ್ಗ ಎಲ್ಲವೇ ಎಂದರೆ ನರಕ ಎಂದು ಸಾರುವ ಮೂಲಕ ತಮ್ಮ ಮಾನವತಾವಾದಕ್ಕೆ ಸಾಹಿತ್ಯದ ಸ್ಪರ್ಶ ನೀಡಿದರು. ಕನ್ನಡ ಸಾಹಿತ್ಯಕ್ಕೆ ವಚನಗಳ ಮೂಲಕ ಅಪೂರ್ವ ಕೊಡುಗೆ ಅಪಾರ ಇದುವರೆಗೆ ಸುಮಾರು 1500 ವಚನಗಳನ್ನು ಸಂಗ್ರಹಿಸಿಡಲಾಗಿದೆ.

1992 ರಲ್ಲಿ 2 ರೂಪಾಯಿ ಮುಖ ಬೆಲೆಯುಳ್ಳ ಅಂಚೆ ಚೀಟಿಯನ್ನು, ಅಂಚೆ ಇಲಾಖೆಯು ಮತ್ತು ಮುದ್ರಿಸಿತು. ಗುರು ಬಸವಣ್ಣವರ ಭಾವಚಿತ್ರವುಳ್ಳ 5 ರೂಪಯಾ ಮತ್ತು 100 ರೂಪಾಯಿ ನಾಣ್ಯಗಳನ್ನು ಮಾಜಿ ಪ್ರಧಾನಿ ಡಾ. ಮನಮೋಹನ ಸಿಂಗ್ ಅವರು ಬೆಂಗಳೂರಿನಲ್ಲಿ ಬಿಡುಗಡೆಗೊಳಿಸಿದರು. ಬಸವಣ್ಣನವರು ನಾಣ್ಯದ ಮೇಲೆ ಪ್ರಕಟಿಸಲ್ಪಟ್ಟವರಲ್ಲಿ ಪ್ರಥಮ ಕನ್ನಡಿಗ ದಾಗಿದ್ದಾರೆ.

ಗುರು ಬಸವಣ್ಣರವ ಅಶ್ವಾರೂಢ ಮೂರ್ತಿಯನ್ನು ದೆಹಳಯಲ್ಲಿರುವ ಪಾರ್ಲಿಮೆಂಟ್ ನಲ್ಲಿ 27ನೇ ಎಪ್ರೀಲ್ 2003 ರಲ್ಲಿ ಅನಾವರಣಗೊಳಿಸಲಾಯಿತು ನಾವುಗಳು ಬಸವಣ್ಣನವರ ಜಯಂತಿಯನ್ನು ಕೇವಲ ಜಯಂತಿಯನ್ನಾಗಿ ಆಚರಿಸದೆ ಅವರ ಜೀವನವನ್ನು ನಮ್ಮ ಜೀವನವನ್ನಾಗಿ ಮಾಡಿಕೊಳ್ಳಬೇಕು ಬಸವಣ್ಣವರನ್ನು ಮೇರಣಿಗೆಯಲ್ಲಿ ನೋಡದೆ ನಮ್ಮ ನಡುವಳಿಕೆ ನೋಡಬೇಕು. ಬಸವಣ್ಣವರನ್ನು ಕೇವಲ ಮೂರ್ತಿಗಳಲ್ಲಿ ನೋಡಿದ ನಮ್ಮ ಕೃತಿಗಳಲ್ಲಿ ಕಾಣುವಂತಾಗಬೇಕು. ಲೇಖನ ಈರೇಶ ಹುಲಗುಂಚಿ ಮಾನವಿ

# ಇಂದು ಪಟ್ಟಣದಲ್ಲಿ ಬಸವ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕ ಆಡಳಿತ,ತಾಲೂಕ ಪಂಚಾಯತ, ಪುರಸಭೆ ಮತ್ತು ಶ್ರೀ ಬಸವೇಶ್ವರ ಉತ್ಸವ ಸಮಿತಿ ಇವರ ಸಂಯುಕ್ತ ಆಶ್ರಯದಲ್ಲಿ ಕರ್ನಾಟಕ ಸಂಸ್ಕೃತಿಕ ನಾಯಕ ವಿಶ್ವಗುರು ಶ್ರೀ ಬಸವಣ್ಣನವರ 893 ನೇ ಜಯಂತೋತ್ಸವವನ್ನು ಇಂದು(ಏ.20) ಆಚರಿಸಲಾಗುವುದು.**

ಬೆಳಿಗ್ಗೆ 7–30 ಘಂಟೆಗೆ ವಿಶ್ವಗುರು ಬಸವಣ್ಣನವರ ಭಾವಚಿತ್ರದ ಭವ್ಯ ಮೆರವಣಿಗೆ ಪಟ್ಟಣದ ರಾಜವಾಡೆಯಿಂದ ಆರಂಭವಾಗಿ ಕತ್ರಿ ಬಜಾರ, ಶಿವಾಜಿ ವೃತ್ತ, ಮಹಾರಾಣಾ ಪ್ರತಾಪ್ ಸಿಂಹ ವೃತ್ತ, ಬಸ್ ನಿಲ್ದಾಣ ಮಾರ್ಗವಾಗಿ ಶ್ರೀ ಬಸವೇಶ್ವರ ವೃತ್ತಕ್ಕೆ ತಲುಪುವುದು ನಂತರ ಅಲ್ಲಿಯೇ ವೇದಿಕೆ ಕಾರ್ಯಕ್ರಮ ಜರಗುವುದು. ಸಮಾರಂಭವನ್ನು ಕರ್ನಾಟಕ ಸರ್ಕಾರದ



ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಂ.ಬಿ.ಪಾಟೀಲ ಉದ್ಘಾಟಿಸುವರು.

ಕೆ ಎಸ್ ಡಿ ಎಲ್ ಅಧ್ಯಕ್ಷ ಹಾಗೂ ಮುದ್ದೇಬಿಹಾಳ ಶಾಸಕರಾದ ಅಪ್ಪಾಜಿ ನಾಡಗೌಡರು ಅಧ್ಯಕ್ಷತೆ ವಹಿಸುವರು.ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲರ ಸಹ ಅಧ್ಯಕ್ಷತೆ ಇರುವುದು. ಮುಖ್ಯ ಅತಿಥಿಗಳಾಗಿ ಜವಳಿ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್.ಪಾಟೀಲ, ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ರವಿಕುಮಾರ್ ಎನ್, ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ–2 ಪ್ರಕಾಶ ಬಿ.ಹುಕ್ಕೇರಿ, ಸಂಸದ ರಮೇಶ ಚಂ.ಜಿಗಜಿಣಗಿ , ರಾಜ್ಯಸಭೆ ಸದಸ್ಯೆ ಸುಧಾಮೂರ್ತಿ, ವಿಧಾನ ಪರಿಷತ್ ಸದಸ್ಯರಾದ ಹಣಮಂತ ಆರ್ ನಿರಾಣಿ,ಸುನೀಲಗೌಡ ಬಿ.ಪಾಟೀಲ,ಪಿ.ಎಚ್.ಪೂಜಾರ, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತಾ ನಾಯ್ಕ, ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಅ.ಬಬಲೇಶ್ವರ, ಕರ್ನಾಟಕ ಲಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಬಿಎಸ್ ಕವಲಗಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಸಂಗಮೇಶ ದೇಸಾಯಿ ಆಗಮಿಸುವರು. ಜೆ.ಎಸ್.ಜಿ. ಫೌಂಡೇಶನ್ ಕಾರ್ಯದರ್ಶಿ ಶ್ರೀಕಾಂತ ಪತ್ತಾರ ವಿಶೇಷ ಉಪನ್ಯಾಸ ನೀಡುವರು. ತಹಸಿಲ್ದಾರ್ ಡಾ.ವಿನಯಾ ಎ.ಹೂಗಾರ,ತಾಪಂ ಇಓ ಅನಸೂಯಾ ಚಲವಾದಿ, ಬಿಇಓ ಬಿ.ಎಸ್.ಸಾವಳಗಿ, ಸಿಪಿಐ ಮೊಹಮ್ಮದ್ ಫಸಿವುದ್ದೀನ ಹಾಗೂ ಪುರಸಭೆ ಮುಖ್ಯಾಧಿಕಾರಿ ವಸಂತ್ ಪವಾರ ಉಪಸ್ಥಿತ–ರಿರುವರು. ಸದರಿ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಗೆ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ತಾಲೂಕಾಡಳಿತದ ಪ್ರಕಟಣೆ ತಿಳಿಸಿದೆ.

# ಸಚಿವರಿಂದ 20 ಲಕ್ಷ ವೆಚ್ಚದಲ್ಲಿ ವೀರಶೈವ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಚಾಲನೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಪಂಪಾ ಕಾಲೋನಿ ಈಶ್ವರ ದೇವಸ್ಥಾನದ ಹತ್ತಿರ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್. ಎಸ್,ಬೋಸರಾಜು 2025–26 ನೇ ಸಾಲಿನ ಸಿ.ಎಂ.ಐ.ಡಿ.ಪಿ.ಯೋಜನೆಯಡಿಯಲ್ಲಿ ಅಂ–ದಾಜು 20 ಲಕ್ಷ ವೆಚ್ಚದಲ್ಲಿ ವೀರಶೈವ ಸಮಾಜದ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆಯನ್ನು ನೆರವೇರಿಸಿ ಕಾಮಗಾ–ರಿಗೆ ಚಾಲನೆ ನೀಡಿ ಮಾತನಾಡಿ ಪಟ್ಟಣದ ಹೃದಯಭಾಗದಲ್ಲಿರುವ ಈಶ್ವರ ದೇವಸ್ಥಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಿದು ದೇವಸ್ಥಾನದ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ 20 ಲಕ್ಷ ಅನುದಾನದಲ್ಲಿ**



ವೀರಶೈವ ಸಮಾಜದ ಸಮುದಾಯ ಭವನ ನಿರ್ಮಾಣ ಮಾಡಲಾಗುತ್ತಿದೆ ಎಂದು ತಿಳಿಸಿದರು. ಶಾಸಕ ಹಂಪಯ್ಯನಾಯಕ, ಮಾಜಿ ಶಾಸಕರಾದ ಬಸವನಗೌಡ ಬ್ಯಾಗವಾಟ,ನಯೋಪ್ರ ಅಧ್ಯಕ್ಷರಾದ ಅಬ್ದುಲ್ ಗಾಫೂರ್ ಸಾಬ್, ಕಲ್ಮಠ ಸಂಗಯ್ಯಸ್ವಾಮಿ, ಡಾ.ಬಸವಪ್ರಭು ಪಾಟೀಲ್,ದೊಡ್ಡಬಸಪ್ಪಗೌಡ ಭೋಗವತಿ, ಟಿ.ಎ.ಪಿ.ಸಿ.ಎಂ.ಸಿ. ಅಧ್ಯಕ್ಷರಾದ ತಿಮ್ಮರೆಡ್ಡಿಗೌಡ ಭೋಗವತಿ, ತಾಲೂಕು ವೀರಶೈವ ಲಿಂಗಾಯತ ಸಮಾಜದ ತಾ.ಅಧ್ಯಕ್ಷರಾದ ಹರಿಹರ ಪಾಟೀಲ್,ಗೌರವಧ್ಯಕ್ಷರಾದ ಶ್ರೀಧರಸ್ವಾಮಿ, ಅಖಿಲಭಾರತ ವೀರಶೈವ ಲಿಂಗಾಯತ ಮಹಾಸಭಾ ತಾ.ಅಧ್ಯಕ್ಷರಾದ ಅರುಣಚಂದಾ, ರೇವಣಸಿದ್ದಯ್ಯಸ್ವಾಮಿ, ವೀರನಗೌಡ ವಕೀಲರು, ರಾಜಾ ಸುಭಾಶ್ಚಂದ್ರನಾಯಕ,ಜಗದೀಶ ಓತ್ತೂರ್, ಸಂಗಮೇಶ ಮುಧೋಳ್ ಸೇ–ರಿದಂತೆ ವೀರಶೈವ ಲಿಂಗಾಯತ ಸಮಾಜದ ಮುಖಂಡರು ಭಾಗವಹಿಸಿದರು.

## ಎಲ್ಲರ ಪ್ರೀತಿ ವಿಶ್ವಾಸಗಳಿಸಿದ ಏಕೈಕ ಈ ಭಾಗದ ಹೃದಯ ವಂತ ರಾಜಕಾರಣಿ ಅನ್ವರಿ :ಜಗದೀಶ್ ಶೆಟ್ಟರ್

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಪ್ರಭುದ್ದ ರಾಜ ಕಾರಣಿಯಾಗಿ ಹಳ್ಳಿಯಿಂದ ದಿಲ್ಲಿಯವರೆಗೆ ತಮ್ಮ ದೇ ಆದ ರಾಜಕೀಯ ಚಾಪು ಮೂಡಿಸಿ ಎಲ್ಲರ ಪ್ರೀತಿ ವಿಶ್ವಾಸಗಳಿಸಿದ ಏಕೈಕ ಈ ಭಾಗದ ಹೃದಯ ವಂತ ರಾಜಕಾರಣಿ ಅಸೀಮ ನಾಯಕನಾಗಿ ಹೊರ ಹೊಮ್ಮಿದ ನಾಯಕ ಬಸವರಾಜ್ ಅನ್ವರಿ ಎಂದು ಮಾಜಿ ಮುಖ್ಯ ಮಂತ್ರಿ ಹಾಲಿ ಲೋಕಸಭಾ ಸದಸ್ಯ ಜಗದೀಶ್ ಶೆಟ್ಟರ್ ಹೇಳಿದರು.**

ಅವರಿಂದು ಪಟ್ಟಣದ ರಾಯಚೂರು ರಸ್ತೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಮಾಜಿ ಕೇಂದ್ರ ಸಚಿವ ಬಸವರಾಜ ಪಾಟೀಲ್ ಅನ್ವರಿಯವರ 84ನೇ ಜನ್ಮ ದಿನದ ಸಹಸ್ರ, ಚಂದ್ರ ದರ್ಶನ ಅಭಿನಂದನ ಸಮಾರಂಭ ಹಾಗೂ ಅನ್ವರಿ ಅಸೀಮ ನಾಯಕನ ಅಭಿನಂದನ ಗ್ರಂಥ ಲೋಕಾರ್ಪಣೆ ಕಾರ್ಯಕ್ರವನ್ನು ಉದ್ಘಾಟಿಸಿ ಮಾತನಾಡಿದ ಅವರು ಬಸವರಾಜ್ ಪಾಟೀಲ್ ಅನ್ವರಿಯವರು ಕೇಂದ್ರ ಸಚಿವರಾಗಿದ್ದಾಗ ಹಲವು ಕಾರ್ಖಾನೆ ಗಳನ್ನು ತಂದು ಸಾವಿರಾರು ಜನತೆಗೆ ಉದ್ಯೋಗ ದೊರಕಿಸಿ ಕೊಟ್ಟರು.

ಅವರ ರಾಜಕೀಯ ಜೀವನದಲ್ಲಿ ಅನೇಕ ಸವಾಲುಗಳನ್ನು ಎದುರಿಸಿ ಆಸೀಮಾ ರಾಜ ಕಾರಣಿಯಾಗಿ ಎಲ್ಲರ ಪ್ರೀತಿ ವಿಶ್ವಾಸ ವನ್ನು ಗಳಿಸಿದ ರಾಜಕಾರಣಿಯಾಗಿ ಬೆಳೆದಿದ್ದಾರೆ. ತಾವೆಲ್ಲರೂ ಅವರ ಮೇಲಿನ ನಂಬಿಕೆ, ಪ್ರೀತಿ, ವಿಶ್ವಾಸಕ್ಕೆ ಸ್ಪೂರ್ತಿಯಂತೆ ಸಾವಿರಾರು ಅಭಿಮಾನಿಗಳು ಸೇರಿ ವಿಜೃಂಭಣೆಯಿಂದ ಅವರ ಜನ್ಮದಿನವನ್ನು ಆಚರಿಸುತ್ತಿರುವುದು ಬಹಳ







ಸಂತೋಷ ತಂದಿದೆ. ಅನ್ವರಿ ಯವರ ಆಯಸ್ಸು ಆರೋಗ್ಯ ಇನ್ನೂ ಹೆಚ್ಚು ವೃದ್ಧಿಸಲಿ ಭಗವಂತನಲ್ಲಿ ಎಲ್ಲರೂ ಪ್ರಾರ್ಥಿಸೋಣ ಇದು ಒಂದು ಇತಿಹಾಸ ಸೃಷ್ಟಿಸುವ ಕಾರ್ಯಕ್ರಮ ಇವರು ಎಲ್ಲರ ಹೃದಯ ಗೆದ್ದಿದ್ದಾರೆನ್ನುವುದಕ್ಕೆ ಸಾಕ್ಷಿ, ಈ ಭಾಗದಲ್ಲಿ 3 ಸಲ ಹಾಗೂ ಕೊಪ್ಪಳದಲ್ಲಿ 2 ಸಲ ಸಂಸದರಾಗಿ ಗೆದ್ದು ಕೆಲಸ ಮಾಡಿದ ವ್ಯಕ್ತಿ ಎಂದು ಹೇಳಿದರು.

ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಎಚ್ ಕೆ ಪಾಟೀಲ್ ಅವರು ಅಸೀಮ್ ನಾಯಕನ ಅಭಿನಂದನ ಗ್ರಂಥ ಬಿಡುಗಡೆಗೊಳಿಸಿ ಮಾತನಾಡಿದ ಅವರು ಇಷ್ಟೆಲ್ಲಾ ಜನರು ಹುಟ್ಟುಹಬ್ಬದ ಕಾರ್ಯಕ್ರಮಕ್ಕೆ ಸೇ–ರಿದ್ದಾರೆಂದರೆ ಅವರು ಮಾಡಿದ ಹೆಸರು ಗಳಿಸಿದ ಪ್ರೀತಿ ಅನ್ವರಿ ಯವರು ರೈಲ್ವೆ ಸಚಿವರಾಗಿದ್ದಾಗ ಅವರ ಕೆಲಸ ಸಮರ್ಪಕವಾಗಿ ಮಾಡಿದ್ದಾರೆ. ಇವರು ಸಣ್ಣ ಗ್ರಾಮ ದಿಂದ ಸಿಡಿದೆದ್ದು ಕೇಂದ್ರ ಸಚಿವರಾಗಿದ್ದಾರೆ ಇವರು ಶಾತಾಯುಷಿಗಳಗಿರಲಿ ಎಂದರು . ಕಾರ್ಯಕ್ರಮದ ದಿವ್ಯ ಸಾನಿಧ್ಯ ವನ್ನು ಶ್ರೀ ಮ. ನಿ. ಪ್ರ. ಸಿದ್ದಲಿಂಗ ಮಹಾ ಸ್ವಾಮಿಗಳು ಸುವರ್ಣಗಿರಿ ವಿರಕ್ತಮಠ, ವಳಬಳ್ಳಾರಿ ವಹಿಸಿದ್ದರು.

ನೇತೃತ್ವವನ್ನು ಶ್ರೀ ಮ. ನಿ. ಪ್ರ. ಜಗದ್ಗುರು ಅಭಿನವ ಗವಿಸಿದ್ದೇಶ್ವರ ಮಹಾ ಸ್ವಾಮಿಗಳು ಶ್ರೀ ಗವಿಮಠಕೊಪ್ಪಳ ನೇತೃತ್ವ ವಹಿಸಿದ್ದರು. ಮ ನಿ. ಪ್ರ. ಗುರುಬಸವ ಮಹಾ ಸ್ವಾಮಿಗಳು ಸಂತೆಕೆಲ್ಲೂರ ಸಮ್ಮುಖವಹಿಸಿದ್ದರು.ಮ. ನಿ. ಪ್ರ. ಜಗದ್ಗುರು ಪಕೀರ ದಿಂಗಾಲೇಶ್ವರ ಮಹಾ ಸ್ವಾಮಿಗಳು ಶಿರಹಟ್ಟಿ,ಗುರು ಗಜದಂಡ ಶಿವಾಚಾರ್ಯರು ದೇವರ ಭೂಪೂರ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಏನ್ ಎಸ್ ಬೋಸರಾಜ್, ಸಣ್ಣ ಕೈಗಾರಿಕೆ ಸಚಿವ ಶರಣಬಸಪ್ಪ ದರ್ಶನಾಪೂರ, ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್, ಮಾಜಿ ಸಂಸದರಾದ ರಾಜಾ ಅಮರೇಶ್ವರ ನಾಯಕ,

ಶಾಸಕರಾದ ಹಂಪನಗೌಡ ಬಾದರ್ಲಿ, ಹಂಪಯ್ಯ ಸಾಹುಕಾರ, ಶಿವರಾಜ್ ಪಾಟೀಲ್, ಬಸನಗೌಡ ದದ್ದಲ್ ಶರಣಗೌಡ ಪಾಟೀಲ್ ಬಯ್ಯಾಪುರ,ಮಾಜಿ ಶಾಸಕರಾದ ಅಮರೇಗೌಡ ಪಾಟೀಲ್ ಬಯ್ಯಾ ಪುರ, ವೆಂಕಟರಾವ್ ನಾಡಗೌಡ,ಕೆ ಶಿವನಗೌಡ ನಾಯಕ, ಪ್ರತಾಪ್ ಗೌಡ ಪಾಟೀಲ್, ದೊಡ್ಡನಗೌಡ ಪಾಟೀಲ್, ಬಸನಗೌಡ ಬ್ಯಾಗವಾಟ್ ಸೇರಿದಂತೆ ಹಲವಾರು ಹಾಲಿ ಮಾಜಿ ಶಾಸಕರು ಮುಖಂಡರು ಇದ್ದರು.ಶಾಸಕಮಾನಪ್ಪ ವಜ್ಜಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಬಿ.ಟೆಕ್ ಇನ್ ಕೆಮಿಕಲ್ ಎಂಜಿನಿಯರಿಂಗ್

ಬಿ.ಟೆಕ್ ಇನ್ ಕೆಮಿಕಲ್ ಎಂಜಿನಿಯರಿಂಗ್ ಕೋರ್ಸ್‌ನಲ್ಲಿ ರಸಾಯನಶಾಸ್ತ್ರ, ಭೌತಶಾಸ್ತ್ರ ಹಾಗೂ ಜೀವಶಾಸ್ತ್ರದ ತತ್ವಗಳನ್ನು ಬಳಸಿಕೊಂಡು ದೊಡ್ಡ ಪ್ರಮಾಣದಲ್ಲಿ ರಾಸಾಯನಿಕ ಉತ್ಪಾದನೆಗೆ ಅಗತ್ಯವಾದ ಪ್ರಕ್ರಿಯೆಗಳ ವಿನ್ಯಾಸ ಹಾಗೂ ಅಭಿವೃದ್ಧಿಯನ್ನು ಕಲಿಸಲಾಗುತ್ತದೆ. ಈ ಕೋರ್ಸ್‌ನಲ್ಲಿ ವಿದ್ಯಾರ್ಥಿಗಳು ಥರ್ಮೋಡೈನಾಮಿಕ್ಸ್, ದ್ರವ್ಯರಾಶಿ ಮತ್ತು ಶಾಖ ವರ್ಗಾವಣೆ, ದ್ರವ ಯಂತ್ರಶಾಸ್ತ್ರ ಹಾಗೂ ಪ್ರಕ್ರಿಯೆ ನಿಯಂತ್ರಣ ವಿಷಯಗಳನ್ನು ಆಳವಾಗಿ ಅಧ್ಯಯನ ಮಾಡುತ್ತಾರೆ. ಆಸ್ಪೆನ್ ಪ್ಲಸ್, ಕೆಮ್‌ಕ್ಯಾಡ್ ಮತ್ತು ಊಜಖಜಖ ಮೊದಲಾದ ಕೈಗಾರಿಕಾ ಸಾಫ್ಟ್‌ವೇರ್‌ಗಳನ್ನು ಬಳಸುವ ಪ್ರಾಯೋಗಿಕ ಜ್ಞಾನವನ್ನು ವಿದ್ಯಾರ್ಥಿಗಳು ಪಡೆಯುತ್ತಾರೆ. ಈ ಪದವಿಯನ್ನು ಪೂರ್ಣಗೊಳಿಸಿದ ನಂತರ ರಾಸಾಯನಿಕ ಎಂಜಿನಿಯರ್‌ಗಳು ಔಷಧ ನಿರ್ಮಾಣ, ಪೆಟ್ರೋಕೆಮಿಕಲ್ ಹಾಗೂ ಆಹಾರ ಸಂಸ್ಕರಣಾ ಕೈಗಾರಿಕೆಗಳಲ್ಲಿ ಪ್ರಕ್ರಿಯೆ ಎಂಜಿನಿಯರ್, ಸುರಕ್ಷತಾ ಅಧಿಕಾರಿ ಸೇರಿದಂತೆ ವಿವಿಧ ಹುದ್ದೆಗಳಲ್ಲಿ ಉದ್ಯೋಗಾವಕಾಶಗಳನ್ನು ಪಡೆಯುತ್ತಾರೆ. ಬಿ.ಟೆಕ್ ಇನ್ ಕೆಮಿಕಲ್ ಎಂಜಿನಿಯರಿಂಗ್ (B.Tech Chemical Engineering) ಪ್ರವೇಶ ಅರ್ಹತೆ (Eligibility)? ಕನ್ನಡದಲ್ಲಿ , ಶೈಕ್ಷಣಿಕ ಅರ್ಹತೆ ಪಿಯುಸಿ / 12ನೇ ತರಗತಿ (Science Stream) ಉತ್ತೀರ್ಣರಾಗಿರಬೇಕು

# ಮಾನ್ವಿ ನಗರದಲ್ಲಿ ಅಭಿವೃದ್ಧಿಯ ಹಬ್ಬ ವಿವಿಧ ಸಮುದಾಯ ಭವನಗಳಿಗೆ ಭೂಮಿ ಪೂಜೆ, 7.41 ಕೋಟಿ ಕಾಮಗಾರಿಗಳಿಗೆ ಚಾಲನೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಮಾನ್ವಿ ವಿಧಾನಸಭಾ ಕ್ಷೇತ್ರದಲ್ಲಿ ಸಮಗ್ರ ಅಭಿವೃದ್ಧಿಗೆ ಒತ್ತು ನೀಡುವ ನಿಟ್ಟಿನಲ್ಲಿ ಮಾನ್ವಿ ನಗರದಲ್ಲಿ ವಿವಿಧ ಸಮುದಾಯಗಳಿಗೆ ಸಮುದಾಯ ಭವನಗಳ ನಿರ್ಮಾಣ ಹಾಗೂ ನಗರೋತ್ಥಾನ ಕಾಮಗಾರಿಗಳಿಗೆ ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಪರಿಷತ್ತಿನ ಸಭಾ ನಾಯಕರಾದ ಸನ್ಮಾನ್ಯ ಶ್ರೀ ಎನ್.ಎಸ್. ಬೋಸುರಾಜು ಅವರು ಹಾಗೂ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಶ್ರೀ ಜಿ. ಹಂಪಯ್ಯ ನಾಯಕ್ ಸಾಹುಕಾರ್ ಅವರು ಭೂಮಿ ಪೂಜೆ ನೆರವೇರಿಸಿ ಕಾಮಗಾರಿಗಳಿಗೆ ಚಾಲನೆ ನೀಡಿದರು.**

ಸಮಾಜಗಳ ಸಾಂಸ್ಕೃತಿಕ ಚಟುವಟಿಕೆಗಳು, ಸಭೆಗಳು ಹಾಗೂ ಸಾಮಾಜಿಕ ಕಾರ್ಯಕ್ರಮಗಳಿಗೆ ಶಾಶ್ವತ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ವಿವಿಧ ಸಮುದಾಯ ಭವನಗಳ ನಿರ್ಮಾಣಕ್ಕೆ ಅನುದಾನ ನೀಡಲಾಗಿದೆ. ಈ ಕಾಮಗಾರಿಗಳು ಸ್ಥಳೀಯ ಅಭಿವೃದ್ಧಿಗೆ ಹೊಸ ದಿಕ್ಕು ನೀಡಲಿವೆ ಎಂದು ಗಣ್ಯರು ತಿಳಿಸಿದರು. ಸಮುದಾಯ ಭವನಗಳಿಗೆ ಮಂಜೂರಾದ ಅನುದಾನ ರಾಘವೇಂದ್ರ ಗುರೂಜಿ ಮಠ ಸಮುದಾಯ ಭವನ 25 ಲಕ್ಷ ವೀರಶೈವ



ಸಮಾಜ ಸಮುದಾಯ ಭವನ 20 ಲಕ್ಷ ಕಾಕತಿಯ ಶಾಲೆ ಸಮುದಾಯ ಭವನ 20 ಲಕ್ಷ ಗಂಗಾಮತ ಸಮಾಜ ಸಮುದಾಯ ಭವನ 20 ಲಕ್ಷ ಯಾದವ್ ಸಮಾಜ ಸಮುದಾಯ ಭವನ 20 ಲಕ್ಷ ಹೇಳವರ ಸಮುದಾಯ ಭವನ 10 ಲಕ್ಷ ಕನಕ ಭವನ ಅಭಿವೃದ್ಧಿ 20 ಲಕ್ಷ ಸಣ್ಣ ಖುರೇಶಿ ಸಮುದಾಯ ಭವನ 10 ಲಕ್ಷ ದೊಡ್ಡ ಖುರೇಶಿ ಸಮುದಾಯ ಭವನ ಅಭಿವೃದ್ಧಿ 10 ಲಕ್ಷ ಶ್ರೀ ಕಾಳಿಕಾಂಬ ದೇವಿ ದೇವಸ್ಥಾನ ಅಭಿವೃದ್ಧಿ 15 ಲಕ್ಷ ನೇಕಾರರ ಸಮಾಜ ಸಮುದಾಯ ಭವನ 20 ಲಕ್ಷ ಸವಿತಾ ಸಮಾಜ ಸಮುದಾಯ ಭವನ 20 ಲಕ್ಷ ಒಟ್ಟು 5 ಕೋಟಿ 26 ಲಕ್ಷ ವೆಚ್ಚದ ಕಾಮಗಾರಿಗಳು.

ನಗರೋತ್ಥಾನ ಯೋಜನೆ ಮಾನ್ವಿ ಪುರಸಭೆ ವ್ಯಾಪ್ತಿಯ ವಿವಿಧ ವಾರ್ಡುಗಳಲ್ಲಿ ರಸ್ತೆ, ಮೂಲಸೌಕರ್ಯ ಹಾಗೂ ನಾಗರಿಕ ಸೌಲಭ್ಯಗಳ ಅಭಿವೃದ್ಧಿಗಾಗಿ 2 ಕೋಟಿ 15 ಲಕ್ಷ 24 ಸಾವಿರ ರೂಪಾಯಿಗಳ ಕಾಮಗಾರಿಗಳಿಗೆ ಇದೇ ಸಂದರ್ಭದಲ್ಲಿ ಚಾಲನೆ ನೀಡಲಾಯಿತು. ನಾಯಕರ ಮಾತು ಈ ಸಂದರ್ಭ ಮಾತನಾಡಿದ ಗಣ್ಯರು, ಮಾನ್ವಿ ನಗರವನ್ನು ಅಭಿವೃದ್ಧಿ ಪಥ-



'ದಲ್ಲಿ ಮುಂದಕ್ಕೆ ತೆಗೆದುಕೊಂಡು ಹೋಗುವುದು ಸರ್ಕಾರದ ಪ್ರಮುಖ ಗುರಿಯಾಗಿದ್ದು, ಎಲ್ಲಾ ಸಮುದಾಯಗಳಿಗೆ ಸಮಾನ ಸೌಲಭ್ಯ ಕಲ್ಪಿಸುವ ಕಾರ್ಯ ನಿರಂತರವಾಗಿ ಮುಂದುವರಿಯಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತಿ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಬಸನಗೌಡ ಬ್ಯಾಗವಾಟ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಗಫೂರ್ ಸಾಬ್, ಪಂಚ ಗ್ಯಾರಂಟಿ ಸಮಿತಿ ಅಧ್ಯಕ್ಷ ಬಿ.ಕೆ. ಅಮರೇಶಪ್ಪ ವಕೀಲರು, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ದೊಡ್ಡಬಸಪ್ಪ ಗೌಡ ಭೂಗವತಿ, ರೌಡ್ರು ಮಹಾಂತೇಶ ಸ್ವಾಮಿ, ಶಿವರಾಜ್ ನಾಯಕ್ ವಕೀಲರು ಸೇರಿದಂತೆ ಅನೇಕ ರಾಜಕೀಯ ಮುಖಂಡರು, ಸಮಾಜದ ಹಿರಿಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಮಹಿಳಾ ಸಬಲೀಕರಣದ ಮುಖವಾಡ ಧರಿಸಿ ಬಿಜೆಪಿ ಸರ್ಕಾರದಿಂದ ಭೀಕರ ಸಂಚು :ಡಿಕೆಶಿ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಕೇಂದ್ರದ ಬಿಜೆಪಿ ಸರ್ಕಾರವು ಮಹಿಳಾ ಸಬಲೀಕರಣದ ಮುಖವಾಡ ಧರಿಸಿ ದಕ್ಷಿಣ ಭಾರತದ ರಾಜಕೀಯ ಅಸ್ಮಿತೆಯನ್ನು ಅಳಿಸಲು ಭೀಕರ ಸಂಚು ರೂಪಿಸಿದೆ ಎಂದು ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಈ ಕುರಿರು ಪ್ರಕಟಣೆ ನೀಡಿರುವ ಅವರು, ಬಿಜೆಪಿ ಜಾರಿಗೆ ತರಲು ಹೊರಟಿರುವ ಮಹಿಳಾ ಮೀಸಲಾತಿ ಮಸೂದೆಯು ಕೇವಲ ಒಂದು ಮಾಯಾಜಾಲವಾಗಿದ್ದು, ಇದು ದಕ್ಷಿಣದ ರಾಜ್ಯಗಳ ಹಕ್ಕುಗಳನ್ನು ಕಸಿದುಕೊಳ್ಳಲು ನಡೆಸುತ್ತಿರುವ ರಾಜಕೀಯ ಸರ್ಜಿಕಲ್ ಸ್ಟ್ರೈಕ್ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.**



ಕ್ಷೇತ್ರ ಮರುವಿಂಗಡಣೆ ಎಂಬ ಕುತಂತ್ರ: ಮಹಿಳೆಯರಿಗೆ ರಾಜಕೀಯ ಅಧಿಕಾರ ಸಿಗಬೇಕು ಎಂಬುದು ಕಾಂಗ್ರೆಸ್ ಪಕ್ಷದ ಅಚಲ ನಿಲುವು. ರಾಜೀವ್ ಗಾಂಧಿಯವರು ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ತಂದಾಗ ವಿರೋಧಿಸಿದವರು ಈಗ ಮಹಿಳಾ ಮೀಸಲಾತಿಯ ಜಪ ಮಾಡುತ್ತಿದ್ದಾರೆ. ಆದರೆ, ಈ ಮೀಸಲಾತಿ ಜಾರಿಯಾಗಲು ಕ್ಷೇತ್ರ ಮರುವಿಂಗಡಣೆ ಆಗಲೇಬೇಕು ಎಂಬ ಷರತ್ತು ವಿಧಿಸಿರುವುದು ತರ್ಕಹೀನವಾದುದು. ಇದು ಮಹಿಳೆಯರಿಗೆ ತಕ್ಷಣಕ್ಕೆ ನ್ಯಾಯ ಒದಗಿಸುವ ಬದಲು, ಮೀಸಲಾತಿಯನ್ನು ಮುಂದೂಡುವ ಮತ್ತು ಮರುವಿಂಗಡಣೆಯನ್ನು ಬಿಜೆಪಿಯ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವ ಷಡ್ಯಂತ್ರವಾಗಿದೆ ಎಂದು ಕಿಡಿಕಾರಿದ್ದಾರೆ. ಪ್ರಗತಿಪರ ರಾಜ್ಯಗಳಿಗೆ ಸಿಗುತ್ತಿರುವ ಶಿಕ್ಷೆಯೇ?: ಕ್ಷೇತ್ರ ಮರುವಿಂಗಡಣೆಯಿಂದ ದಕ್ಷಿಣ ಭಾರತಕ್ಕೆ ಅನ್ಯಾಯವನ್ನು ಆಗುತ್ತಿದೆ. ಕರ್ನಾಟಕ, ತಮಿಳುನಾಡು, ಕೇರಳದಂತಹ ರಾಜ್ಯಗಳು ರಾಷ್ಟ್ರೀಯ ಹಿತಾಸಕ್ತಿಯಿಂದ ಜನಸಂಖ್ಯೆಯನ್ನು ಯಶಸ್ವಿಯಾಗಿ ನಿಯಂತ್ರಿಸಿವೆ. ಆದರೆ, ಈಗ ಕೇಂದ್ರ ಸರ್ಕಾರ ಜನಸಂಖ್ಯೆ ಹೆಚ್ಚಿಸಿಕೊಂಡ ರಾಜ್ಯಗಳಿಗೆ ಹೆಚ್ಚಿನ ಸಂಸತ್ ಸ್ಥಾನ ನೀಡಿ, ಜನಸಂಖ್ಯೆ ನಿಯಂತ್ರಿಸಿದ ನಮ್ಮಂತಹ ಪ್ರಗತಿಪರ ರಾಜ್ಯಗಳ ಪ್ರಾತಿನಿಧ್ಯ ಕುಗ್ಗಿಸಲು ಹೊರಟಿದೆ. ಇದು ಕನ್ನಡಿಗರ ಹಾಗೂ ಇಡೀ ದಕ್ಷಿಣ ಭಾರತೀಯರ ಸ್ವಾಭಿಮಾನಕ್ಕೆ ಎಸಗುತ್ತಿರುವ ದ್ರೋಹ ಎಂದು ಡಿ.ಕೆ.ಶಿವಕುಮಾರ್ ಕಡಿನುಡಿಗಳನ್ನಾಡಿದ್ದಾರೆ. ಮಹಿಳಾ ಮೀಸಲಾತಿ ನೀಡಲು ಕ್ಷೇತ್ರ ಮರುವಿಂಗಡಣೆ ಆಗಲೇಬೇಕು ಎಂಬ ಹಠವೇಕೆ? ಈಗಿರುವ 543 ಕ್ಷೇತ್ರಗಳಲ್ಲೇ ಮೀಸಲಾತಿ ನೀಡಲು ಕೇಂದ್ರ ಸರ್ಕಾರಕ್ಕೆ ಇರುವ ತೊಂದರೆಗಳೇನು ಎಂದು ಸರಣಿ ಪ್ರಶ್ನೆಗಳನ್ನು ಡಿ.ಕೆ.ಶಿವಕುಮಾರ್ ಮುಂದಿಟ್ಟಿದ್ದಾರೆ. ಜನಸಂಖ್ಯೆ ನಿಯಂತ್ರಿಸಿದ ದಕ್ಷಿಣದ ರಾಜ್ಯಗಳ ಸಂಸತ್ ಸ್ಥಾನಗಳ ಸಂಖ್ಯೆ ಇಳಿಕೆಯಾಗುವುದಿಲ್ಲ ಎಂದು ಕೇಂದ್ರ ಸರ್ಕಾರ ಕಾನೂನಾತ್ಮಕವಾಗಿ ಗ್ಯಾರೆಂಟಿ ನೀಡುತ್ತದೆಯೇ ಎಂದು ಸವಾಲು ಹಾಕಿದ್ದಾರೆ.

# ಗೃಹಲಕ್ಷ್ಮಿ ಹಣದಿಂದ ಸ್ವಾವಲಂಬಿ ಬದುಕು ಕಟ್ಟಿಕೊಂಡ ವಿಶಾಲಾಕ್ಷಿ




ನೈಜ್ಯ ದೆಸೆ ನ್ಯೂಸ್

**ಕೊಟ್ಟೂರು ವಿಜಯನಗರ: ಕೊಟ್ಟೂರು ಗೃಹಲಕ್ಷ್ಮಿ ಯೋಜನೆ ಹಣವನ್ನು ಕೂಡಿಟ್ಟು ಮಹಿಳೆಯೊಬ್ಬರು ಸಣ್ಣದಾಗಿ ಐಸ್ ಕ್ರೀಮ್ ಅಂಗಡಿ ತೆರೆದು ಬದುಕು ಕಟ್ಟಿಕೊಂಡಿದ್ದಾರೆ. ಕೊಟ್ಟೂರು ತಾಲ್ಲೂಕಿನ ಹರಾಳು ಗ್ರಾಮದಲ್ಲಿ ಮೊದಲ ಬಾರಿಗೆ ಐಸ್ ಕ್ರೀಮ್ ಅಂಗಡಿ ತೆರೆದ ಎನ್. ವಿಶಾಲಾಕ್ಷಿ ಅವರು ಇದೀಗ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.**

ವಿಶಾಲಾಕ್ಷಿ ಇವರ ಖಾತೆಗೆ ಜಮೆಯಾದ ಎರಡೂವರಿ ವರ್ಷದ ಗೃಹಲಕ್ಷ್ಮಿ ಹಣವು ಮಗಳ ಡಿ.ಫಾರ್ಮ್9 ಮುಗಿಸಲು ತುಂಬಾ ಸಹಕಾರಿ ಆಗಿದೆ ಹಾಗೂ ಇನ್ನುಳಿದ ಹಣದಿಂದ ಐಸ್ಕ್ರೀಮ್

**ಸರ್ಕಾರದ ಗೃಹಲಕ್ಷ್ಮಿ ಯೋಜನೆಯು ರಾಜ್ಯದ ಮಹಿಳೆಯರಿಗೆ ಆರ್ಥಿಕವಾಗಿ ಕೈಹಿಡಿದಿದ್ದು ಬಂದ ಹಣದಿಂದ ಹಲವು ಮಹಿಳೆಯರು ಸ್ವ-ಉದ್ಯೋಗ ಮಾಡುವ ಮೂಲಕ ಆರ್ಥಿಕವಾಗಿ ಸಬಲರಾಗಿದ್ದು ನಿರುದ್ಯೋಗ ಸಮಸ್ಯೆ ಸಹ ಈಗ ಕಡಿಮೆಯಾಗಿದೆ.**
**ಎನ್.ವಿಶಾಲಾಕ್ಷಿ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿ ಹರಾಳು (ಗ್ರಾಮ) ತಾ.ಕೊಟ್ಟೂರು**

ಅಂಗಡಿ ತೆರೆದಿರುವೆನು ಎಂದು ವಿಶಾಲಾಕ್ಷಿ ಇವರು ಹೆಮ್ಮೆಯಿಂದ ಹೇಳುವ ಮೂಲಕ ಸರ್ಕಾರಕ್ಕೆ ಧನ್ಯವಾದಗಳನ್ನು ಹೇಳುತ್ತಿದ್ದಾರೆ. ಹ್ಯಾಂಗ್ಯೋ ಕಂಪನಿಯ ಸಹಾಯಹಸ್ತದಿಂದ ಕೊಟ್ಟೂರಿನ ಕಿಶನ್ ಎಂಟರ್ಪ್ರೈಸ್ ವಿತರಕರಿಂದ ಚಾಕೋಬಾರ್, ಐಸ್ ಕ್ಯಾಂಡಿ, ಕುಲ್ಫಿ ಐಸ್, ಕೋನ್ ಐಸ್, ಕಪ್ ಐಸ್ ಇನ್ನಿತರೆ ಎಲ್ಲಾ ತರಹದ ಐಸ್ ಕ್ರೀಮ್ ಉತ್ಪನ್ನಗಳನ್ನು ನೇರವಾಗಿ ಪಡೆದು, ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದಾರೆ.

ಬಿಸಿಲಿನ ತಾಪಕ್ಕೆ ತತ್ತರಿಸಿದ ಜನರು, ಮಕ್ಕಳು ಹಾಗೂ ಯುವಕರು ಇದೀಗ ಮುಗಿಬಿದ್ದು, ತಂಪು ಪಾನೀಯಗಳು ಹಾಗೂ ಐಸ್ ಕ್ರೀಮ್ ಗಳ ಮೊರೆ ಹೋಗುತ್ತಿದ್ದಾರೆ. ಇದುವರೆಗೂ ಬಿಡುಗಡೆಯಾದ ಕಂತುಗಳ ಹಣವನ್ನು ಬ್ಯಾಂಕ್ ಖಾತೆಯಲ್ಲೇ ಉಳಿಸಿ, ಅವರ ಪತಿ ಎನ್. ಬಸವರಾಜ ಅವರ ಸಹಕಾರದೊಂದಿಗೆ ಈ ಉದ್ಯಮವನ್ನು ಆರಂಭಿಸಿರುವುದಾಗಿ ಹೇಳಿಕೊಂಡಿದ್ದಾರೆ. ಉಚಿತ ಭಾಗ್ಯವು ನಮ್ಮ ಬದುಕಿಗೆ ವರದಾನವಾಗಿದೆ, ಅವರ ಹೊಟ್ಟೆ ನೂರಾರು ಕಾಲ ತಣ್ಣಗಿರಲಿ ಎಂದು ಸ್ಮರಿಸಿ, ಸಿಎಂ ಸಿದ್ದರಾಮಯ್ಯ ಅವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಕರ್ನಾಟಕ ಸರ್ಕಾರದ 'ಗೃಹಲಕ್ಷ್ಮಿ ಯೋಜನೆ' ಕುಟುಂಬದ ಯಜಮಾನಿ ಮಹಿಳೆಗೆ ಆರ್ಥಿಕ ಸ್ವಾವಲಂಬನೆ ನೀಡಲು ಪ್ರತಿ ತಿಂಗಳು ನೇರವಾಗಿ 2,000 ಸಹಾಯಧನ ನೀಡುವ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ.

# ಆಂಧ್ರ ಡಿಸಿಎಂ ಪವನ್ ಕಲ್ಯಾಣ್‌ಗೆ ಅನಾರೋಗ್ಯ :ಕರೆ ಮಾಡಿ ಆರೋಗ್ಯ ವಿಚಾರಿಸಿದ ಮೋದಿ

ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು, ಆಂಧ್ರಪ್ರದೇಶದ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರೊಂದಿಗೆ ಮಾತನಾಡಿ ಯೋಗಕ್ಷೇಮ ವಿಚಾರಿಸಿದರು.ಕಳೆದ ಕೆಲವು ತಿಂಗಳುಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದು ಅವರ ಜನ ಸೇನಾ ಪಕ್ಷದ ಪತ್ರಿಕಾ ಪ್ರಕಟಣೆ ತಿಳಿಸಿದೆ.**

ಆಂಧ್ರಪ್ರದೇಶದ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಗಾರು ಅವರೊಂದಿಗೆ ಮಾತನಾಡಿ ಅವರ ಯೋಗಕ್ಷೇಮ ವಿಚಾರಿಸಿದ್ದಾರೆ. ಅವರು ಅಸಾಧಾರಣ ಧೈರ್ಯಶಾಲಿಗಳು ಮತ್ತು ಅವರು ಶೀಘ್ರದಲ್ಲೇ ಚೇತರಿಸಿಕೊಳ್ಳುತ್ತಾರೆ ಎಂದು ನನಗೆ ಖಚಿತವಾಗಿದೆ. ಅವರ ಉತ್ತಮ ಆರೋಗ್ಯಕ್ಕಾಗಿ ಪ್ರಾರ್ಥಿಸುತ್ತೇನೆ ಎಂದು ಮೋದಿ ಅವರು ಎಕ್?ಸನಲ್ಲಿ ಪೋಸ್ಟ್ ಮಾಡಿದ್ದಾರೆ. ಕಲ್ಯಾಣ್ ಆರೋಗ್ಯ ಸಮಸ್ಯೆಯ ನಂತರ ಶನಿವಾರ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಕಲ್ಯಾಣ್ ಜನ ಸೇನಾ ಪಕ್ಷದ ಸ್ಥಾಪಕ ಅಧ್ಯಕ್ಷರು,



ಇದು ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ನೇತೃತ್ವದ ಆಂಧ್ರಪ್ರದೇಶ ಸರ್ಕಾರದ ಒಂದು ಘಟಕವಾಗಿದೆ. ಪಕ್ಷವು ಕೇಂದ್ರದಲ್ಲಿ ಆಡಳಿತಾರೂಢ ಎನ್‌ಡಿಎಯ ಭಾಗವೂ ಆಗಿದೆ.

ಗಣ್ಯರ ಹಾರೈಕೆ : ಆಂಧ್ರಪ್ರದೇಶ ರಾಜ್ಯಪಾಲ ಎಸ್. ಅಬ್ದುಲ್ ನಜೀರ್ ಮತ್ತು ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರ ಶಸ್ತ್ರಚಿಕಿತ್ಸೆಯ ನಂತರ ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಹಾರೈಸಿದ್ದಾರೆ. ಗಂಭೀರ ಅನಾರೋಗ್ಯದ ನಂತರ ಕಲ್ಯಾಣ್ ಅವರಿಗೆ ಶಸ್ತ್ರಚಿಕಿತ್ಸೆನಡೆಸಲಾಗಿದೆ. ಪವನ್ ಕಲ್ಯಾಣ್ ಕಳೆದ ಕೆಲವು ತಿಂಗಳುಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಜನಸೇನಾ ಮುಖ್ಯಸ್ಥರು ತಮ ಅಧಿಕೃತ ಕರ್ತವ್ಯಗಳನ್ನು ಪುನರಾರಂಭಿಸುವ ಮೊದಲು ಸುಮಾರು ಒಂದು ವಾರದಿಂದ 10 ದಿನಗಳವರೆಗೆ ವಿಶ್ರಾಂತಿ ಪಡೆಯುವಂತೆ ವೈದ್ಯರು ಸಲಹೆ ನೀಡಿದ್ದಾರೆ.

ಕಲ್ಯಾಣ್ ಅವರ ಶಸ್ತ್ರಚಿಕಿತ್ಸೆಯ ನಂತರ ಶೀಘ್ರವಾಗಿ ಚೇತರಿಸಿಕೊಳ್ಳಬೇಕೆಂದು ನಾನು ಬಯಸುತ್ತೇನೆ. ಅವರ ತ್ವರಿತ ಚೇತರಿಕೆ ಮತ್ತು ಉತ್ತಮ ಆರೋಗ್ಯಕ್ಕಾಗಿ ಸರ್ವಶಕ್ತನು ಅವರಿಗೆ ಶಕ್ತಿಯನ್ನು ನೀಡಲಿ ಎಂದು ರಾಜ್ಯಪಾಲ ಎಸ್.ಅಬ್ದುಲ್ ನಜೀರ್ ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ. ಕಲ್ಯಾಣ್ ಅವರು ಶೀಘ್ರದಲ್ಲೇ ಶಕ್ತಿಯನ್ನು ಮರಳಿ ಪಡೆಯುತ್ತಾರೆ ಮತ್ತು ಆರೋಗ್ಯವಾಗಿ ಮರಳುತ್ತಾರೆ ಎಂಬ ವಿಶ್ವಾಸವಿದೆ ಎಂದು ಮುಖ್ಯಮಂತ್ರಿ ಹೇಳಿದರು.ಪವನ್ ಕಲ್ಯಾಣ್ ಅವರ ಶಸ್ತ್ರಚಿಕಿತ್ಸೆಯ ನಂತರ ಶೀಘ್ರವಾಗಿ ಚೇತರಿಸಿಕೊಳ್ಳಲು ನನ್ನ ಶುಭಾಶಯಗಳನ್ನು ಕಳುಹಿಸುತ್ತಿದ್ದೇನೆ. ಅವರು ಬೇಗನೆ ಶಕ್ತಿಯನ್ನು ಮರಳಿ ಪಡೆಯಲಿ ಮತ್ತು ಎಂದಿಗಿಂತಲೂ ಹೆಚ್ಚು ಆರೋಗ್ಯವಾಗಿ ಹಿಂತಿರುಗಲಿ ಎಂದು ನಾಯ್ಡು ಪೋಸ್ಟ್ ಮಾಡಿದ್ದಾರೆ.

# 12ನೇ ಶತಮಾನದಿಂದ 21ನೇ ಶತಮಾನದವರೆಗೆ: ಜಗಜ್ಯೋತಿ ಬಸವೇಶ್ವರರ ಚಿಂತನೆ ಇನ್ನೂ ಏಕೆ ಜ್ವಾಲಾಮುಖಿ

**ಇತಿಹಾಸದ ಕೆಲವು ವ್ಯಕ್ತಿಗಳು ಕಾಲದ ಹಾಳೆಗಳಲ್ಲಿ ಸಿಕ್ಕಿಹಾಕಿಕೊಳ್ಳುವುದಿಲ್ಲ. ಅವರು ಕಾಲವನ್ನು ದಾಟಿ,ಯುಗಗಳನ್ನು ತಲುಪಿ,ಚಿಂತನೆಗಳಾಗಿ ಜೀವಿಸುತ್ತಾರೆ. ಅಂತಹ ಶಾಶ್ವತ ಬೆಳಕುಗಳಲ್ಲಿ ಜಗಜ್ಯೋತಿ ಬಸವೇಶ್ವರರು ಪ್ರಮುಖರು.12ನೇ ಶತಮಾನದಲ್ಲಿ ಅವರು ಬಿತ್ತಿದ ಸಮಾನತೆ, ಮಾನವತೆ ಮತ್ತು ಧಾರ್ಮಿಕ ಸುಧಾರಣೆಯ ಬೀಜಗಳು ಇಂದು 21ನೇ ಶತಮಾನದಲ್ಲಿಯೂ ಹಸಿರಾಗಿ ಬೆಳೆಯುತ್ತಿವೆ.**

1. ಜಾತಿ ವ್ಯವಸ್ಥೆಯ ವಿರುದ್ಧ ಅವರ ಧ್ವನಿ ಇಂದಿಗೂ ಅಗತ್ಯ.ಬಸವೇಶ್ವರರು ಜನ್ಮವೇ ಶ್ರೇಷ್ಠವಲ್ಲ,ಕಾರ್ಯವೇ ಶ್ರೇಷ್ಠ ಎಂಬ ತತ್ವವನ್ನು ಬೋಧಿಸಿದರು. ಆ ಕಾಲದಲ್ಲಿ ಜಾತಿ ಆಧಾರಿತ ಶೋಷಣೆ ತೀವ್ರವಾಗಿದ್ದಾಗ, ಅವರು ಸಮಾನತೆಯ ಬಗ್ಗೆ ಮಾತನಾಡುವುದಷ್ಟೇ ಅಲ್ಲ ಕೃತಿಯಲ್ಲೂ ತರಲು ಪ್ರಯತ್ನ ಮಾಡಿದದ್ದು ಕ್ರಾಂತಿಕಾರಿಯಾಗಿದೆ. ಇಂದಿಗೂ ಸಮಾಜದಲ್ಲಿ ಜಾತಿ,ವರ್ಗ, ವರ್ಣದ ಅಂತರಗಳು ಸಂಪೂರ್ಣವಾಗಿ ಮಾಯವಾಗಿಲ್ಲ. ಆದ್ದರಿಂದ ಬಸವೇಶ್ವರರ ಸಂದೇಶ ಇಂದಿಗೂ ದಿಕ್ಕು ತೋರಿಸುವ ದೀಪಸ್ತಂಭದಂತೆ ಇದೆ.

2. "ಕಾಯಕವೇ ಕೈಲಾಸ", ಉದ್ಯೋಗಕ್ಕೆ ಗೌರವ,ಬಸವೇಶ್ವರರ ಪ್ರಸಿದ್ಧ ವಾಕ್ಯ: "ಕಾಯಕವೇ ಕೈಲಾಸ" ಅಂದರೆ, ಯಾವುದೇ ಕೆಲಸ ಸಣ್ಣದಲ್ಲ; ಶ್ರಮವೇ ದೇವರ ಪೂಜೆ.ಇಂದಿನ ಯುವಜನತೆಗೆ ಇದು ಒಂದು ಸ್ಪಷ್ಟ ಸಂದೇಶ. ಉದ್ಯೋಗದ ಗೌರವ ಮುಖ್ಯ,ಕೆಲಸದ ವಿಧಅಲ್ಲ. ಸ್ಟಾರ್ಟ್‌ಅಪ್ ಸಂಸ್ಕೃತಿ, ಸ್ವಯಂ ಉದ್ಯೋಗ.ಇವರ ಅಂದಿನ ಪರಿಕಲ್ಪನೆಯ ಮುಂದುವರೆದ ಭಾಗಗಳಾಗಿವೆ.

3. ಸಮಾನತೆ ಮತ್ತು ಮಹಿಳಾ ಸಬಲೀಕರಣ, ಆ ಕಾಲದಲ್ಲಿ ಮಹಿಳೆಯರು ಸಮಾಜದಲ್ಲಿ ಹಿಂದುಳಿದವರಾಗಿದ್ದರೂ,ಬಸವೇಶ್ವರರು ಅವರಿಗೆ ಸಮಾನ ಹಕ್ಕುಗಳನ್ನು ನೀಡಿದರು. ಅಕ್ಕ ಮಹಾದೇವಿ ಮುಂತಾದ ಮಹಿಳಾ ವಚನಕಾರರು ಬಸವ ಚಳುವಳಿಯ ಫಲ. ಇಂದಿನ ಲಿಂಗ ಸಮಾನತೆ


ಜಗಜ್ಯೋತಿ ಬಸವೇಶ್ವರರು

ಚರ್ಚೆಗಳಲ್ಲಿಯೂ ಈ ತತ್ವ ಅತ್ಯಂತ ಪ್ರಸ್ತುತವಾಗಿದೆ.

4. ಅನುಭವ ಮಂಟಪ,ಪ್ರಥಮ ಪ್ರಜಾಪ್ರಭುತ್ವ ವೇದಿಕೆ.ಬಸವೇಶ್ವರರು ಸ್ಥಾಪಿಸಿದ ಅನುಭವ ಮಂಟಪ ಒಂದು ರೀತಿಯಲ್ಲಿ ಪ್ರಥಮ ಸಂವಾದ ವೇದಿಕೆ. ಎಲ್ಲ ವರ್ಗದ ಜನರು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಹಂಚಿಕೊಳ್ಳಬಹುದಾಗಿತ್ತು. ಇದು ಇಂದಿನ ಪ್ರಜಾಪ್ರಭುತ್ವ, ಸಂವಾದ ಮತ್ತು ಸಂವಿಧಾನದ ಮೂಲಭೂತ ಆಲೋಚನೆಗಳ ಮುನ್ನುಡಿಯಾಗಿದೆ.

5.ಧಾರ್ಮಿಕ ಸಹಿಷ್ಣುತೆ ಮತ್ತು ಮಾನವತಾವಾದ. ಬಸವೇಶ್ವರರು ದೇವರು ಕಲ್ಲಿನಲ್ಲಿಲ್ಲ,ಮಾನವನಲ್ಲಿದ್ದಾರೆ ಎಂದು ಸಾರಿದರು. ಅವರ ವಚನಗಳು ಧರ್ಮದ ಹೆಸರಿನಲ್ಲಿ ನಡೆಯುವ ವಿಭಜನೆಗಳಿಗೆ ವಿರುದ್ಧವಾಗಿ ಮಾನವೀಯತೆಯನ್ನು ಉತ್ತೇಜಿಸುತ್ತವೆ. ಇಂದಿನ ಧಾರ್ಮಿಕ ಸಂಘರ್ಷಗಳ ನಡುವೆ, ಅವರ ಸಂದೇಶ ಶಾಂತಿಯ ಮಂತ್ರವಾಗಿದೆ.

6.ಪರಿಸರ ಮತ್ತು ಸರಳ ಜೀವನ ಬಸವೇಶ್ವರರು ಸರಳ ಜೀವನ ಮತ್ತು ಪ್ರಕೃತಿಯೊಂದಿಗೆ ಹೊಂದಾಣಿಕೆಯನ್ನು ಪ್ರೋತ್ಸಾಹಿಸಿದರು. ಇಂದಿನ ಪರಿಸರ ಸಂಕಷ್ಟದ ಸಂದರ್ಭದಲ್ಲಿ ಇದು ಹೆಚ್ಚು ಪ್ರಸ್ತುತವಾಗಿದೆ.

ಉಪಸಂಹಾರ:-ಜಗಜ್ಯೋತಿ ಬಸವೇಶ್ವರರು ಕೇವಲ ಇತಿಹಾಸದ ಪುಟವಲ್ಲ; ಅವರು ಒಂದು ಚಿಂತನೆ, ಒಂದು ಚಳುವಳಿ, ಒಂದು ಜೀವಂತ ಮೌಲ್ಯ. ಅವರ ತತ್ವಗಳು ಕೇವಲ ಓದುವದಕ್ಕಾಗಿಯಲ್ಲ ಅನುಸರಿಸಲು. ಇಂದಿನ ಸಮಾಜಕ್ಕೆ ಬೇಕಾದ ಸಮಾನತೆ, ಮಾನವೀಯತೆ, ಮತ್ತು ಶ್ರಮದ ಗೌರವದ ಬಗ್ಗೆ ಅಂದೆ ಸಾರಿದ ಶರಣ ಬಸವೇಶ್ವರರಾಗಿದ್ದಾರೆ. ಹೀಗಾಗಿ ಅವರು ಇತಿಹಾಸವಲ್ಲ ಅವರು ಭವಿಷ್ಯದ ಮಾರ್ಗದರ್ಶಿ!"



ಸುರೇಶ ಬಳಗಾನೂರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.